ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಶನಿವಾರ, ಸೆಪ್ಟೆಂಬರ್ 23, 2023
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 131 RNI : 27369/75

janathavani@mac.com
www.janathavani.com
☎ 08192 254736 91642 99999


## ದಸರಾ ನಂತರ ಜೆಡಿಎಸ್ - ಬಿಜೆಪಿ ಸೀಟು ಹಂಚಿಕೆ

ನವದೆಹಲಿ, ಸೆ. 22 – ದಸರಾ ಹಬ್ಬದ ನಂತರ ಜೆಡಿಎಸ್ ಹಾಗೂ ಬಿಜೆಪಿಗಳು ಸೀಟು ಹಂಚಿಕೆ ಕುರಿತು ನಿರ್ಧಾರ ತೆಗೆದುಕೊಳ್ಳಲಿವೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕದ ಬಿಜೆಪಿ ಮುಖಂಡರ ಜೊತೆ ಚರ್ಚೆ ನಡೆಸಿದ ನಂತರ ಸೀಟುಗಳು ಹಾಗೂ ಕ್ಷೇತ್ರಗಳ ಹಂಚಿಕೆಯ ಬಗ್ಗೆ ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ದಸರಾ ಹಬ್ಬ ಬರುವ ದಿನವಾದ ಅಕ್ಟೋಬರ್ 24ರ (5ನೇ ಪುಟಕ್ಕೆ)

## ಸೆ.25ರ ವೇಳೆಗೆ ಮುಂಗಾರಿಗೆ ತೆರೆ

ನವದೆಹಲಿ, ಸೆ. 22 – ಮುಂಗಾರಿಗೆ ಸೆಪ್ಟೆಂಬರ್ 25ರ ವೇಳೆಗೆ ತೆರೆ ಬೀಳಬಹುದು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸಾಮಾನ್ಯವಾಗಿ ಮುಂಗಾರು ಸೆಪ್ಟೆಂಬರ್ 17ರಿಂದ ಹಿಂದೆ ಸರಿಯಲು ಆರಂಭವಾಗುತ್ತದೆ. ಅಕ್ಟೋಬರ್ 15ರ ವೇಳೆಗೆ ಸಂಪೂರ್ಣವಾಗಿ ಮುಂಗಾರು ಹಿಂದೆ (5ನೇ ಪುಟಕ್ಕೆ)


## ಹೃದಯಪೂರ್ವಕ ಕೃತಜ್ಞತೆಗಳು




ನನ್ನ ಜನ್ಮ ದಿನಕ್ಕೆ ಶುಭಾಶೀರ್ವಾದ ಮಾಡಿದ ಸಿರಿಗೆರೆಯ ತರಳಬಾಳು ಬೃಹನ್ಮಠದ ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರಿಗೂ, ಶ್ರೀಶೈಲ ಪೀಠದ ಜಗದ್ಗುರು ಶ್ರೀ ಚನ್ನಸಿದ್ಧರಾಮ ಪಂಡಿತಾರಾಧ್ಯ ಮಹಾಸ್ವಾಮಿಗಳವರಿಗೂ, ತುಮಕೂರಿನ ಸಿದ್ಧಗಂಗಾ ಮಠದ ಅಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿಯವರಿಗೂ, ಹರಿಹರದ ವೀರಶೈವ-ಲಿಂಗಾಯಿತ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿಯವರಿಗೂ, ಎಲ್ಲಾ ಹರ-ಚರ ಮಠಾಧೀಶರುಗಳಿಗೂ ಹಾಗೂ ಶುಭ ಹಾರೈಸಿದ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ್ ಖರ್ಗೆ ಅವರಿಗೂ, ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಿಗೂ, ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರಿಗೂ, ಎಲ್ಲಾ ಸಚಿವರುಗಳಿಗೂ, ಶಾಸಕರುಗಳಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಜನ್ಮ ದಿನಕ್ಕೆ ಶುಭ ಕೋರಲೆಂದು ಬೆಂಗಳೂರಿನಿಂದ ಆಗಮಿಸಿದ್ದ ನನ್ನ ಆತ್ಮೀಯ ಗೆಳೆಯರಾಗಿದ್ದ ದಿ|| ಶ್ರೀ ಅಂಬರೀಶ್ ಅವರ ಪುತ್ರ ಶ್ರೀ ಅಭಿಷೇಕ್ ಅವರಿಗೂ, ರಾಜ್ಯದ ವಿವಿಧ ಕಡೆಗಳಿಂದ ಆಗಮಿಸಿದ್ದ ನನ್ನ ಆತ್ಮೀಯರಿಗೂ, ಸ್ನೇಹ ಬಳಗವರಿಗೂ, ಅಭಿಮಾನಿಗಳಿಗೂ ಕೃತಜ್ಞತೆಗಳು.

ಅದೇ ರೀತಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪೊಲೀಸ್ ಅಧೀಕ್ಷಕರಿಗೂ, ತಹಶೀಲ್ದಾರರಿಗೂ ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ದಾವಣಗೆರೆ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಿಗೂ ಮತ್ತು ಎಲ್ಲಾ ಶಾಸಕರಿಗೂ, ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೂ, ಮುಖಂಡರಿಗೂ, ಕಾರ್ಯಕರ್ತರಿಗೂ ಹೃದಯಪೂರ್ವಕ ಕೃತಜ್ಞತೆಗಳು.



ನಮ್ಮ ಮನೆಗೆ ನಿನ್ನೆ ರಾತ್ರಿ 12 ರಿಂದ ನನಗೆ ಶುಭ ಕೋರಲು ಆಗಮಿಸಿದ್ದ ನನ್ನ ಹಿತೈಷಿಗಳಿಗೂ, ಆತ್ಮೀಯರಿಗೂ, ಅಭಿಮಾನಿಗಳಿಗೂ ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಎಲ್ಲಾ ಶಾಲಾ - ಕಾಲೇಜುಗಳು ಮತ್ತು ಆಸ್ಪತ್ರೆಗಳ ಮುಖ್ಯಸ್ಥರಿಗೂ, ಸಿಬ್ಬಂದಿ ವರ್ಗದವರಿಗೂ ಹೃದಯಪೂರ್ವಕ ಕೃತಜ್ಞತೆಗಳು. ದೂರವಾಣಿ, ದೂರದರ್ಶನ, ಪತ್ರಿಕೆಗಳ ಮೂಲಕ ಶುಭ ಕೋರಿದ ನಿಮ್ಮ ಶುಭ ಹಾರೈಕೆ ನನ್ನ ಮುಂದಿನ ರಾಜಕೀಯ ಭವಿಷ್ಯಕ್ಕೆ ಇನ್ನಷ್ಟು ಸ್ಫೂರ್ತಿದಾಯಕವಾಗಿದ್ದು, ನಿಮ್ಮ ಅಭಿಮಾನಕ್ಕೆ ನಾನು ಆಭಾರಿಯಾಗಿದ್ದೇನೆ.

ನನಗೆ ಪ್ರತ್ಯಕ್ಷ - ಪರೋಕ್ಷವಾಗಿ ಶುಭ ಕೋರಿದ ಸರ್ವರಿಗೂ ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.



**ಎಸ್. ಎಸ್. ಮಲ್ಲಿಕಾರ್ಜುನ್**
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು
ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ.



mm FOAM
WAKE UP POSITIVE

ಅತ್ಯಾಕರ್ಷಕ **ವಿನಿಮಯ** ಕೊಡುಗೆ

ನಿಮ್ಮ ಹಳೆಯ ಹಾಸಿಗೆಗಳನ್ನು
ನಂಬಲಾಗದ ಬೆಲೆಗೆ ಮಾರಾಟ ಮಾಡಿ



**ಕೊಡುಗೆಗಳು**

ರೂ.15,000* ದವರೆಗಿನ ಮೌಲ್ಯದ ಉಡುಗೊರೆಗಳು
ರೂ.8,000* ದವರೆಗಿನ ವಿನಿಮಯ ಮೌಲ್ಯ
ರೂ.4,000* ದವರೆಗಿನ ಮೌಲ್ಯದ ಹಾಸಿಗೆಗಳು ಅಥವಾ ದಿಂಬುಗಳು
ರೂ.3,000* ದವರೆಗಿನ ಮೌಲ್ಯದ ಗಿಫ್ಟ್ ವೋಚರ್‌ಗಳು

+

ಫ್ಲಾಟ್ 10% ವಿನಿಮಯ ರಿಯಾಯಿತಿ

+

ತೊಂದರೆ-ಮುಕ್ತವಾಗಿ ಹಳೆಯ ಹಾಸಿಗೆಗಳನ್ನು ಪಡೆಯುತ್ತೇವೆ ಮತ್ತು ಹೊಸ ಹಾಸಿಗೆಗಳನ್ನು ನೀಡುತ್ತೇವೆ

*ಷರತ್ತುಗಳು ಅನ್ವಯ

Davangere: Kothari Distributors - 94800 12387
Kothari Home Furnishings - 99640 70408 / 72599 25299


## 11ನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ದೊಗ್ಗಳ್ಳಿ ನಾಗರತ್ನಮ್ಮ**

ನಿಧನ : 23.09.2012

*ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ.*

ದಿ|| ದೊಗ್ಗಳ್ಳಿ ಜಯಣ್ಣನವರ ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು, ಬಂಧು-ಮಿತ್ರರು ಹಾಗೂ ದೊಗ್ಗಳ್ಳಿ ವಂಶಸ್ಥರು.

## ಕಿರುವಾಡಿ ವಿರೂಪಾಕ್ಷಪ್ಪ ನಿಧನ



ದಾವಣಗೆರೆಯ ಹೆಸರಾಂತ ಕಿರುವಾಡಿ ಮನೆತನದ **ಶ್ರೀ ಕಿರುವಾಡಿ ವಿರೂಪಾಕ್ಷಪ್ಪ** ಅವರು ದಿನಾಂಕ 22-09-2023ರ ಶುಕ್ರವಾರ ಮುಂಜಾನೆ 5.30ಕ್ಕೆ ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ 4ನೇ ಮುಖ್ಯರಸ್ತೆ 5ನೇ ತಿರುವಿನಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 83 ವರ್ಷ ವಯಸ್ಸಾಗಿತ್ತು. ಧರ್ಮಪತ್ನಿ - ಅಂತರರಾಷ್ಟ್ರೀಯ ಯೋಗಪಟು ಶ್ರೀಮತಿ ಕಿರುವಾಡಿ ಸರಸ್ವತಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೂವರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22-09-2023ರ ಶುಕ್ರವಾರ ಮಧ್ಯಾಹ್ನ 3.30 ಕ್ಕೆ ಶಾಮನೂರು ಬಳಿಯ ಗ್ಲಾಸ್‌ಹೌಸ್ ಹತ್ತಿರದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ, ಕಿರುವಾಡಿ ವಂಶಸ್ಥರು

|| ಶ್ರೀ ನಾರದಮುನಿ ಪ್ರಸನ್ನ ||

## ಶ್ರೀ ಆರ್.ಜಿ. ಜಯದೇವಪ್ಪ ನಿಧನ



ದಾವಣಗೆರೆ ಸಿಟಿ ಪಿ.ಜೆ. ಬಡಾವಣೆ, 8ನೇ ಮುಖ್ಯ ರಸ್ತೆ, # 677ರ ವಾಸಿ

**ಶ್ರೀ ಆರ್. ಜಿ. ಜಯದೇವಪ್ಪನವರು**

ದಿನಾಂಕ : 22.09.2023ನೇ ಶುಕ್ರವಾರ ಬೆಳಿಗ್ಗೆ 10.35ಕ್ಕೆ ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಸುಮಾರು 93 ವರ್ಷ ವಯಸ್ಸಾಗಿತ್ತು. ಮೃತರು ಐವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 23.09.2023ರ ಶನಿವಾರ ಬೆಳಿಗ್ಗೆ 8.30ಕ್ಕೆ ದಾವಣಗೆರೆ ಬೂದಾಳ್ ರಸ್ತೆಯಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ :

ಶ್ರೀಮತಿ ಶ್ರೀ ಆರ್.ಜಿ. ನರೇಂದ್ರಕುಮಾರ್
ಶ್ರೀಮತಿ ಪುಷ್ಪ ಕೆ.ಬಿ. ಮಲ್ಲಿಕಾರ್ಜುನ್
ಶ್ರೀಮತಿ ಶೋಭ ಮನೋಹರ್ ಬುಳಗಣ್ಣನವರು
ಶ್ರೀಮತಿ ಶ್ರೀ ಆರ್.ಜಿ. ಧನೇಶ್, ಶ್ರೀಮತಿ ಶ್ರೀ ಆರ್.ಜಿ. ರಾಜೇಶ್
ಶ್ರೀಮತಿ ಶ್ರೀ ಆರ್.ಜಿ. ಸುನಿಲ್, ಶ್ರೀಮತಿ ಶ್ರೀ ಆರ್.ಜಿ. ನಿಖಿಲ್ ಮತ್ತು ಕುಟುಂಬದವರು, ರಾಂಪುರ ಗೌಡ್ರು ವಂಶಸ್ಥರು ಹಾಗೂ ಹಿತೈಷಿಗಳು, ಬಂಧು-ಮಿತ್ರರು.

ಆರ್.ಜಿ. ಜಯದೇವಪ್ಪ ಅಂಡ್ ಸನ್ಸ್, ಚಾಮರಾಜಪೇಟೆ, ದಾವಣಗೆರೆ. ಫೋ. : 99019 56336, 98801 56162, 98455 36000

# ಕೇಂದ್ರದ ಅಸಹಕಾರದಿಂದ ವಿದ್ಯುತ್ ಕ್ಷಾಮ

## ಸಿಎಂ ಎದುರು ಅಸಹಾಯಕತೆ ವ್ಯಕ್ತಪಡಿಸಿದ ಅಧಿಕಾರಿಗಳು

ಬೆಂಗಳೂರು, ಸೆ.22- ಕೇಂದ್ರದ ಅಸಹಕಾರದಿಂದ ರಾಜ್ಯದಲ್ಲಿ ವಿದ್ಯುತ್ ಕ್ಷಾಮ ಎದುರಾಗಲಿದೆ ಎಂದು ಅಧಿಕಾರಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲೇ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಇದೇ ಪರಿಸ್ಥಿತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ವಿದ್ಯುತ್ ಕಡಿತ ಅನಿವಾರ್ಯ ಎಂಬ ಅಂಶವನ್ನು ಇಂದು ನಡೆದ ಇಂಧನ ಇಲಾಖೆಯ ಸಭೆಯಲ್ಲಿ ಗಮನಕ್ಕೆ ತರಲಾಗಿದೆ. ವಿದ್ಯುತ್ ಉತ್ಪಾದನೆಯಲ್ಲಿ ನಾವು ಮೈಲಿಗಲ್ಲು ಸಾಧಿಸಿ ಬೇರೆ ರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡುತ್ತಿದ್ದೆವು. ಆದರೆ, ಏಕಾಏಕಿ ಇಂಥ ಪರಿಸ್ಥಿತಿ ನಿರ್ಮಾಣಕ್ಕೆ ಕಾರಣವೇನು ಎಂದು ಅಧಿಕಾರಿಗಳನ್ನು ಮುಖ್ಯಮಂತ್ರಿಗಳು ಪ್ರಶ್ನಿಸಿದಾಗ ಈ ಮಾಹಿತಿ ನೀಡಿದ್ದಾರೆ.

ಮುಂಗಾರು ಮಳೆಯ ವೈಫಲ್ಯ ಒಂದೆಡೆಯಾದರೆ, ಗೃಹಜ್ಯೋತಿ ಅನುಷ್ಠಾನಗೊಂಡ ನಂತರ ಬಳಕೆ ಜಾಸ್ತಿಯಾಗಿದೆ. ಮಳೆ ಇಲ್ಲದೆ, ರೈತರು ಕೃಷಿ ಪಂಪ್‌ಸೆಟ್‌ಗಳ ಮೊರೆ ಹೋಗಿದ್ದಾರೆ.

ಮಳೆ ಸೇರಿದಂತೆ ಇತರೆ ಹವಾಮಾನ ವೈಪರೀತ್ಯದಿಂದ ಪವನ ಶಕ್ತಿ ಹಾಗೂ ಸೌರ ವಿದ್ಯುತ್ ಉತ್ಪಾದನೆ ಕುಂಠಿತವಾಗಿದೆ. ನಾವು ಅನಿವಾರ್ಯವಾಗಿ ಮುನ್ನೆಚ್ಚರಿಕೆ ಕ್ರಮವಾಗಿ ವಿದ್ಯುತ್ ಖರೀದಿ ಮಾಡಿ ಪೂರೈಕೆ ಮಾಡಿದರೆ ಲೋಡ್ ಶೆಡ್ಡಿಂಗ್ ಮಾಡುವ ಮೂಲಕ ಪರಿಸ್ಥಿತಿ ನಿಭಾಯಿಸಬಹುದು ಎಂದಿದ್ದಾರೆ.

ಕೇಂದ್ರ ಸರ್ಕಾರ ನಮಗೆ ಕಲ್ಲಿದ್ದಲು ಪೂರೈಕೆಯನ್ನು ಸಮರ್ಪಕವಾಗಿ ಒದಗಿಸದಿರುವುದರಿಂದ ನಾವು ಪೂರ್ಣ ಪ್ರಮಾಣದಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದಿಸಲಾಗುತ್ತಿಲ್ಲ. ಜತೆಗೆ ಕಲ್ಲಿದ್ದಲಿನ ಗುಣಮಟ್ಟವೂ ಉತ್ತಮವಾಗಿಲ್ಲ. ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ.

ಪ್ರತಿದಿನ ಎರಡು ರೇಕುಗಳಷ್ಟು ಹೆಚ್ಚುವರಿ ಕಲ್ಲಿದ್ದಲು ಹಂಚಿಕೆ ಕೋರಿದ್ದೇವೆ. ಇದಲ್ಲದೆ, ಕಲ್ಲಿದ್ದಲು ಆಮದು ಮಾಡಲು ಟೆಂಡರ್ ಕರೆಯಲಾಗಿದೆ. ನಮ್ಮ ಬೇಡಿಕೆಗೆ ಕೇಂದ್ರ ಸ್ಪಂದಿಸಿದರೆ, ಒಂದಷ್ಟು ವಿದ್ಯುತ್ ಸಮಸ್ಯೆ ಬಗೆಹರಿಸಬಹುದು ಎಂದು ತಿಳಿಸಿದ್ದಾರೆ.

ಸದ್ಯ ಕೇವಲ 32,009 ಮೆಗಾ ವ್ಯಾಟ್ ಉತ್ಪಾದನೆ ಆಗುತ್ತಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಉತ್ಪಾದನೆ ಪ್ರಮಾಣ ಹೆಚ್ಚಳವಾಗಿಲ್ಲ ಏಕೆ ಎಂದು ಮುಖ್ಯಮಂತ್ರಿ ವಿವರಣೆಗಳನ್ನು ಕೇಳಿದರು.

ನಮ್ಮ ಮೊದಲ ಅವಧಿಯ ಸರ್ಕಾರದಲ್ಲಿ ಎಲ್ಲಾ ಸಮಸ್ಯೆಗಳ ನಡುವೆಯೇ ವಿದ್ಯುತ್ ಉತ್ಪಾದನೆ ದುಪ್ಪಟ್ಟಾಗಿತ್ತು. ನಾವು ಅಧಿಕಾರಕ್ಕೆ ಬಂದ 2013 -14ರಲ್ಲಿ 14,048 ಮೆಗಾವ್ಯಾಟ್ ಉತ್ಪಾದನೆ ಆಗುತ್ತಿತ್ತು. 2017-18ರ ವೇಳೆಗೆ 27,780 ಮೆಗಾವ್ಯಾಟ್‌ಗೆ ಉತ್ಪಾದನೆ ಏರಿಕೆಯಾಗಿತ್ತು. ಬಹುತೇಕ ದುಪ್ಪಟ್ಟಾಗಿತ್ತು ಎಂದು ಸ್ಮರಿಸಿದರು.

ರಾಜ್ಯದ ಸ್ಥಾಪಿತ ಸಾಮರ್ಥ್ಯ ಅನುಸಾರವಾಗಿ ವಿದ್ಯುತ್ ಉತ್ಪಾದನೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ ಮುಖ್ಯಮಂತ್ರಿಗಳು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ತೇವಗೊಂಡ ಕಲ್ಲಿದ್ದಲು ಬಳಕೆ ಮಾಡದಂತೆ ಸೂಚನೆ ನೀಡಿದರು.

ನೀರಾವರಿಗೆ ಸೌರ ವಿದ್ಯುತ್ ಪಂಪ್‌ಸೆಟ್‌ಗಳ ಬಳಕೆಯನ್ನು ಉತ್ತೇಜಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಇದರಿಂದ ಅಕ್ರಮ ನೀರಾವರಿ ಪಂಪ್‌ಸೆಟ್ ಹಾವಳಿ ಹಾಗೂ ವಿದ್ಯುತ್ ಪ್ರಸರಣ ಸೋರಿಕೆಯನ್ನು ತಡೆಗಟ್ಟಲು ಸಾಧ್ಯ ಎಂಬ ಅಂಶಗಳ ಕುರಿತು ಅಧಿಕಾರಿಗಳು ಮುಖ್ಯಮಂತ್ರಿಗಳ ಗಮನ ಸೆಳೆದರು.

ಗೃಹ ಜ್ಯೋತಿ ಯೋಜನೆಯಡಿ ಆಗಸ್ಟ್ ತಿಂಗಳಲ್ಲಿ 1.26 ಕೋಟಿ ಗ್ರಾಹಕರಿಗೆ ಹಾಗೂ ಸೆಪ್ಟೆಂಬರ್ ತಿಂಗಳಲ್ಲಿ 1.35 ಕೋಟಿ ಗ್ರಾಹಕರಿಗೆ ಶೂನ್ಯ ಮೊತ್ತದ ವಿದ್ಯುತ್ ಬಿಲ್ ನೀಡಲಾಗಿದೆ. ಇದಕ್ಕಾಗಿ 1400 ಕೋಟಿ ರೂ. ಒದಗಿಸಲಾಗಿದೆ ಎನ್ನುವ ವಿವರ ನೀಡಿದರು.

ಎಸ್ಕಾಂ ಗಳ ಆರ್ಥಿಕ ಸ್ಥಿತಿಗತಿ ಕುರಿತೂ ಸಹ ಸಭೆಯಲ್ಲಿ ಚರ್ಚಿಸಲಾಯಿತು. ವಿದ್ಯುತ್ ಸೋರಿಕೆ ಕುರಿತಂತೆ ರಾಜ್ಯದ ಎಲ್ಲ ಎಸ್ಕಾಂ ಗಳೂ ಹೆಚ್ಚಿನ ಗಮನ ಹರಿಸುವಂತೆ ಸೂಚಿಸಿದರು. ಅಂತೆಯೇ ಅಗತ್ಯವಿರುವಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಕೆ ಹಾಗೂ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗೆ ಕ್ರಮ ವಹಿಸುವಂತೆ ಸೂಚಿಸಿದರು.

ಪ್ರಸಕ್ತ ವರ್ಷದಲ್ಲಿ ವಿದ್ಯುತ್ ಉಪಕೇಂದ್ರಗಳ ಸ್ಥಾಪನೆಗಾಗಿ 2500 ಕೋಟಿ ರೂ. ಒದಗಿಸಲಾಗಿದೆ. ರಾಜ್ಯದ ಪ್ರಸಕ್ತ ವಿದ್ಯುತ್ ಪರಿಸ್ಥಿತಿ ಕುರಿತು ಹಾಗೂ ಆರ್ಥಿಕ ಸ್ಥಿತಿಗತಿ ಕುರಿತಂತೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸುವುದು ಸೂಕ್ತ ಎಂದು ಮುಖ್ಯಮಂತ್ರಿಗಳು ಸಲಹೆ ನೀಡಿದರು.

# ರಾಣೇಬೆನ್ನೂರಿನ ಐದು ಬೃಹತ್ ಕೈಗಾರಿಕೆಗಳು : ಶಾಸಕ ಕೋಳಿವಾಡ



ರಾಣೇಬೆನ್ನೂರು, ಸೆ. 22 - ಸರ್ಕಾರದ ಚಿಂತನೆಯಂತೆ ಬೃಹತ್ ಪ್ರಮಾಣದ 5 ಕೈಗಾರಿಕೆಗಳು ರಾಣೇಬೆನ್ನೂರಿಗೆ ಬರಲಿವೆ. ಈ ಕುರಿತು ಮುಖ್ಯಮಂತ್ರಿ ಹಾಗೂ ಕೈಗಾರಿಕಾ ಮಂತ್ರಿಗಳ ಜೊತೆ ಚರ್ಚಿಸಲಾಗಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಅವರು ತಾಲ್ಲೂಕು ಕ್ರೀಡಾಕೂಟ ಹಾಗೂ ಪ್ರತಿಭಾ ಕಾರಂಜಿ ಉದ್ಘಾಟಿಸಿ ಅವರು ಮಾತನಾಡಿದರು.

ಸ್ಪೋಕನ್ ಇಂಗ್ಲಿಷ್ ಹಾಗೂ ಕಂಪ್ಯೂಟರ್ ನಾಲೇಜ್ ಇಲ್ಲದವರು ಯಾವ ಪದವಿ ಪಡೆದರೂ ಉದ್ಯೋಗ ಸಿಗಲಾರದು ಕಾರಣ ಎಲ್ಲ ವಿದ್ಯಾರ್ಥಿಗಳು ಈ ಬಗ್ಗೆ ತೀವ್ರ ಗಮನಹರಿಸಬೇಕು. ಸ್ವಾವಲಂಭಿ ಬದುಕು ನಡೆಸಿ ದೇಶದ ಅಭಿವೃದ್ಧಿಗೆ ಕಾರಣರಾಗಬೇಕು ಎಂದು ಶಾಸಕ ಕೋಳಿವಾಡ ಹೇಳಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ ಮಾತನಾಡಿ, ನಮ್ಮ ಜನಪದ, ನಮ್ಮ ಕಲೆ, ಸಂಸ್ಕೃತಿ ಮುಂತಾದವುಗಳನ್ನ ಉಳಿಸಿ ಬೆಳೆಸಲು ಪ್ರತಿಭಾ ಕಾರಂಜಿಯಂತ ಕಾರ್ಯಕ್ರಮವನ್ನು ಏರ್ಪಡಿಸಿದ್ದು ಇದು ಮುಂದಿನ ಪೀಳಿಗೆಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ತಾಲ್ಲೂಕು ಶಿಕ್ಷಣ ಸಂಸ್ಥೆಯ ಸೀತಾ ಸಾಹುಕಾರ, ಎಂ.ಡಿ. ದ್ಯಾಮಣ್ಣನವರ ಶಿಕ್ಷಕರ ವಿವಿದ ಸಂಘಟನೆಗಳ ಅದ್ಯಕ್ಷ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

ಶಾಸಕ ಪ್ರಕಾಶ ಓಲಂಪಿಕ್ ದ್ವಜಾರೋಹಣ ನಡೆಸಿ, ಚಕ್ರ ಎಸೆದು ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ನಗರಸಭೆ ಸದಸ್ಯ ಪ್ರಕಾಶ ಬುರಡಿಕಟ್ಟಿ ಕ್ರೀಡಾಜ್ಯೋತಿ ಬೆಳಗಿಸಿದರು. ಹಿಂದುಸ್ಥಾನ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಆನಂದ ಹುಲಬನ್ನಿ, ಜುಲ್ಫಿಕರ್ ಸೌದಾಗರ, ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

## ನಗರದಲ್ಲಿ ಇಂದು ವಿಶ್ವ ಛಾಯಾಗ್ರಹಣ ದಿನಾಚರಣೆ

ಫೋಟೋಗ್ರಾಫರ್ಸ್ ಯೂತ್ ವೆಲ್‌ಫೇರ್ ಅಸೋಸಿಯೇಷನ್, ಛಾಯಾಗ್ರಾಹಕರ ಸಹಕಾರ ಸಂಘದ ಸಂಯುಕ್ತಾಶ್ರಯದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಕಮ್ಮವಾರಿ ಸಮುದಾಯ ಭವನದಲ್ಲಿ ವಿಶ್ವ ಛಾಯಾಗ್ರಹಣ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ. ಅಸೋಸಿಯೇಷನ್ ಅಧ್ಯಕ್ಷ ಶ್ರೀನಾಥ್ ಪಿ. ಅಗಡಿ ಅಧ್ಯಕ್ಷತೆ ವಹಿಸುವರು. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳು : ಡಾ.ಎಂ.ವಿ. ವೆಂಕಟೇಶ್, ವಿಲ್ಸನ್ ಗೂನ್ಸಾಲ್ವಿಸ್, ಹೆಚ್.ಎಸ್. ನಾಗೇಶ್, ದೇವರಮನಿ ಶಿವಕುಮಾರ್, ವಿಜಯ್ ಕುಮಾರ್ ಜಾಧವ್, ಎಸ್.ಆರ್. ತಿಪ್ಪೇಸ್ವಾಮಿ, ಎಸ್. ದುಗ್ಗಪ್ಪ ಮತ್ತಿತರರು.

ಬೆಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ನುರಿತ ತಜ್ಞರಿಂದ ಕಾರ್ಯಾಗಾರ, ಹಿರಿಯ ಛಾಯಾಗ್ರಾಹಕರಾದ ಸುರಭಿ ಶಿವಮೂರ್ತಿ, ಪಿ.ಎಸ್. ರವಿ ಅವರಿಗೆ ಸನ್ಮಾನ, ಛಾಯಾಗ್ರಾಹಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ.

ಸಂಜೆ 6 ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಕೊಪ್ಪಳ ಗವಿಸಿದ್ಧೇಶ್ವರ ಮಠದ ಶ್ರೀ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಅಸೋಸಿಯೇಷನ್ ಅಧ್ಯಕ್ಷ ಶ್ರೀನಾಥ್ ಪಿ. ಅಗಡಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳು : ಉಮಾ ಪ್ರಶಾಂತ್, ಡಾ. ಪ್ರಭಾ ಮಲ್ಲಿಕಾರ್ಜುನ್, ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ, ಇ.ಎಂ. ಮಂಜುನಾಥ, ಹೆಚ್.ಕೆ.ಸಿ. ರಾಜು, ಅರುಣ್ ಕುಮಾರ್ ಬಿ. ಪಾಟೀಲ್, ಎನ್.ಮಲ್ಲಿಕಾರ್ಜುನ್ ಮತ್ತಿತರರು.

## ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ 7 ಗಂಟೆ ವಿದ್ಯುತ್‌ಗೆ ಆಗ್ರಹ



ಹೊನ್ನಾಳಿ

ಹೊನ್ನಾಳಿ, ಸೆ.22- ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕುಗಳಲ್ಲಿ ಸಮರ್ಪಕ ಮಳೆಯಾಗದೇ ಬರಗಾಲ ತಲೆ ತೋರಿದ್ದು ರೈತರಿಗೆ ಸಮರ್ಪಕ ವಿದ್ಯುತ್ ವ್ಯವಸ್ಥೆ ಕಲ್ಪಿಸುವಂತೆ ಕಾಂಗ್ರೆಸ್ ಯುವ ನಾಯಕ ಡಿ.ಎಸ್.ಸುರೇಂದ್ರ ಗೌಡ ಮನವಿ ಮಾಡಿದರು.

ಬೆಂಗಳೂರಿನ ಬೆಸ್ಕಾಂ ಕಛೇರಿಯಲ್ಲಿ ಎಂ.ಡಿ. ಮಹಾಂತೇಶ್ ಬೀಳಗಿ ಅವರನ್ನು ಭೇಟಿಯಾಗಿ, ರೈತರ ಕೃಷಿ ಪಂಪ್ ಸೆಟ್‌ಗಳಿಗೆ ನಿರಂತರ 7 ಗಂಟೆ ವಿದ್ಯುತ್ ಸೌಲಭ್ಯವನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.

## ವಿಕಲಚೇತನ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗ ಮೇಳ

ದಾವಣಗೆರೆ, ಸೆ. 22 - ವಿಕಲಚೇತನರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಭಾರತ ಸರ್ಕಾರ, ಉದ್ಯೋಗ ಮಹಾ ನಿರ್ದೇಶನಾಲಯ, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಅಮೇರಿಕಾ ಇಂಡಿಯಾ ಫೌಂಡೇಷನ್ ಮತ್ತು ಸರ್ಕಾರಿ ಗಿರಿಧರ ರಾಮನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್ ಇವರುಗಳ ಸಹಯೋಗದೊಂದಿಗೆ ಇದೇ ದಿನಾಂಕ 26 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಸರ್ಕಾರಿ ಗಿರಿಧರ ರಾಮನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್ ಆವರಣದಲ್ಲಿ ವಿಕಲಚೇತನ ನಿರುದ್ಯೋಗಿ ಯುವಕ-ಯುವತಿಯರಿಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ.

ದಾವಣಗೆರೆ ಜಿಲ್ಲೆಯ ಅರ್ಹ ನಿರುದ್ಯೋಗಿ ವಿಕಲಚೇತನರು ಸದುಪಯೋಗ ಪಡೆದುಕೊಳ್ಳಬಹುದು ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ|| ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

# ಸಚಿವ ಎಸ್ಸೆಸ್ಸೆಂ ವ್ಯಕ್ತಿಯಲ್ಲ, ಶಕ್ತಿ : ಮಂಜಪ್ಪ



ಹೊನ್ನಾಳಿ

ಹೊನ್ನಾಳಿ, ಸೆ. 22- ಕರ್ನಾಟಕದ ಭೂಪಟದಲ್ಲಿ ದಾವಣಗೆರೆಯ ಹೆಸರು ಖ್ಯಾತಿ ಹೊಂದಲು ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಶಾಮನೂರು ಶಿವಶಂಕರಪ್ಪನವರು ಕಾರಣೀಭೂತರಾಗಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ ಅವರು ಬಣ್ಣಿಸಿದರು.

ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ 56ನೇ ಹುಟ್ಟುಹಬ್ಬದ ಪ್ರಯುಕ್ತ ಆಸ್ಪತ್ರೆಯ ರೋಗಿಗಳಿಗೆ ಹಣ್ಣು-ಬ್ರೆಡ್ ವಿತರಿಸಿ ಅವರು ಮಾತನಾಡಿದರು.

ಆಕಸ್ಮಿಕವಾಗಿ ರಾಜಕೀಯಕ್ಕೆ ಧುಮುಕಿದ ಎಸ್ಸೆಸ್ಸೆಂ ಅವರು ತಮ್ಮ ತಂದೆಯ ಜೊತೆಗೂಡಿ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಕಂಕಣ ಬದ್ಧರಾಗಿ ಕಾರ್ಯ ನಿರ್ವಹಿಸುತ್ತಾ ಕೇವಲ ವ್ಯಕ್ತಿಯಾಗದೇ ಶಕ್ತಿಯಾಗಿ ಜಿಲ್ಲೆಯ ನೊಂದವರ ಆಸರೆಯಾಗಿ ಹೊರಹೊಮ್ಮಿದ್ದಾರೆ ಎಂದು ಗುಣಗಾನ ಮಾಡಿದರು.


ಈ ಹಿಂದೆಯೂ ಸಚಿವರಾಗಿದ್ದಾಗ ರಾಜ್ಯದ ಕೃಷಿ ಮಾರುಕಟ್ಟೆಗಳಿಗೆ ಕಾಯಕಲ್ಪ, ದಾವಣಗೆರೆ ನಗರದ ಶಾಶ್ವತ ಕುಡಿಯುವ ನೀರಿನ ಯೋಜನೆ, ಏಷ್ಯಾದಲ್ಲಿಯೇ ಅತೀ ದೊಡ್ಡ ಗಾಜಿನ ಮನೆ, ಕೊಳಚೆ ಪ್ರದೇಶವಾಗಿದ್ದ ಕುಂದುವಾಡದ ಕೆರೆಯನ್ನು ಅಭಿವೃದ್ಧಿಪಡಿಸಿ ಅದಕ್ಕಾಗಿ ಸ್ವಂತ ಹಣವನ್ನೂ ಬಳಸಿ ಅವರು ಮಾಡಿದ ಸಾಧನೆಯನ್ನು ಜನತೆ ಇಂದಿಗೂ ಮರೆತಿಲ್ಲವೆಂದು ತಿಳಿಸಿದರು.

ಕೊರೊನಾ ಸಂದರ್ಭದಲ್ಲಿ ಕೋವಿಡ್ ಲಸಿಕೆಗಾಗಿ ತಮ್ಮ ಸ್ವಂತ 7 ಕೋಟಿ ಹಣವನ್ನು ವಿನಿಯೋಗಿಸಿ ಜನರ ಸಂಕಷ್ಟಗಳಿಗೆ ಮಿಡಿದ ಮಾನವೀಯತೆಯ ಸಾಕಾರಮೂರ್ತಿ ಎಂದು ಶ್ಲಾಘಿಸಿದರು.

ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್. ನಾಗಪ್ಪ ಮಾತನಾಡಿದರು.ಹೊನ್ನಾಳಿ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಸಣ್ಣಕ್ಕಿ ಬಸವನಗೌಡ ಮಾತನಾಡಿ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ದಾವಣಗೆರೆಯಲ್ಲಿ ರಕ್ತ ನಿಧಿ ಸ್ಥಾಪಿಸಿ ಅವಶ್ಯಕತೆಯಿರುವವರಿಗೆ ಉಚಿತ ರಕ್ತದ ವ್ಯವಸ್ಥೆ, ಕಿಡ್ನಿ ಸಮಸ್ಯೆಯಿರುವ ಬಡವರಿಗೆ ಉಚಿತ ಡಯಾಲಿಸಿಸ್ ಕೇಂದ್ರವನ್ನು ತೆರೆಯುವ ಮೂಲಕ ಮಾನವೀಯತೆ ಮೆರೆದಿದ್ದಾರೆ ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ಪುರಸಭಾ ಸದಸ್ಯರಾದ ರಾಜೇಂದ್ರ, ಮೈಲಪ್ಪ, ಮಾಜಿ ಸದಸ್ಯ ಎಚ್.ಬಿ. ಅಣ್ಣಪ್ಪ, ಸಿಂಗಟಗೆರೆ ಗ್ರಾ.ಪಂ. ಸದಸ್ಯ ಅಣ್ಣಪ್ಪ, ಕಾಂಗ್ರೆಸ್ ಮುಖಂಡರಾದ ಎಚ್.ಡಿ. ವಿಜೇಂದ್ರಪ್ಪ, ಕೆ.ಆರ್.ವಸಂತನಾಯ್ಕ್, ಬಿ.ಕೆ. ಮಾದಪ್ಪ, ಅರಕೆರೆ ಮಧುಗೌಡ, ಬಸವರಾಜ್ ಮಾರಜೋಗಿ, ಬಾಹುಬಲಿ, ಸ್ವರೂಪ್ ಬಣ್ಣಜ್ಜಿ, ಪದ್ಮಾನಾಯ್ಕ, ಮಂಜು ಬಂತಿ, ತೊಳಕಿ ಮಾದೇಶ, ಸಿದ್ದು, ರಘು ಕವಳಿ, ಗೋಪಾಲಪ್ಪ, ಮಲ್ಲೇಶ್, ಮೇಘರಾಜ್, ರಾಮು ಮತ್ತಿತರರು ಉಪಸ್ಥಿತರಿದ್ದರು.

## ನಗರದ ವಿಠಲ ಮಂದಿರದಲ್ಲಿ ಇಂದು ಮಹಾಮೃತ್ಯುಂಜಯ ಜಪ



ಮಹಾರಾಜಪೇಟೆಯ ಶ್ರೀ ವಿಠ್ಠಲ ಮಂದಿರದ ಶ್ರೀ ಭಾವಸಾರ ಕ್ಷತ್ರಿಯ ತರುಣ ಮಂಡಳ ವತಿಯಿಂದ ಗಣಪತಿ ಮಹೋತ್ಸವ ಅಂಗವಾಗಿ ಇಂದು ಬೆಳಿಗ್ಗೆ 7 ಗಂಟೆಗೆ 108 ಮಹಾ ಮೃತ್ಯುಂಜಯ ಜಪ ಮತ್ತು ಅಷ್ಟ ದ್ರವ್ಯ ಗಣಪತಿ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಸಾಮೂಹಿಕ ಪೂಜೆ, ಮಧ್ಯಾಹ್ನ 12ಕ್ಕೆ ಮಹಾ ಮಂಗಳಾರತಿ, ಶ್ರೀ ಸಂತ ಸಮಾರಾಧನೆ ಸಂಜೆ 4 ಗಂಟೆಗೆ, ಮಹಿಳೆಯರಿಂದ ಕಳಸ, ಭಜನೆ, ಮಂಗಳ ವಾದ್ಯ ಹಾಗೂ ಭಜನೆಯೊಂದಿಗೆ ಶ್ರೀ ಗಣಪತಿ ವಿಸರ್ಜಿಸಲಾಗುವುದು.

## ನಗರದಲ್ಲಿಂದು ಗಣಪತಿ ವಿಸರ್ಜನೆ



ದೇವರಾಜ ಅರಸು ಬಡಾವಣೆ 'ಸಿ', ಬ್ಲಾಕ್ 3, ನೇ ಮೇನ್, 2, ನೇ ಕ್ರಾಸ್‌ನಲ್ಲಿ ಲಯನ್ ಕಿಂಗ್ ಬಾಯ್ಸ್ ಗೆಳೆಯರ ಬಳಗದಿಂದ 2ನೇ ವರ್ಷದ ವಿನಾಯಕ ಮಹೋತ್ಸವ ನಡೆಯುತ್ತಿದ್ದು, ಇಂದು ಮಧ್ಯಾಹ್ನ 2ರಿಂದ 9ರವರೆಗೆ ಮೆರವಣಿಗೆಯ ನಂತರ ಹರಿಹರದಲ್ಲಿ ಗಣೇಶ ವಿಸರ್ಜನೆ ನಡೆಯಲಿದೆ.

## ನಗರದಲ್ಲಿಂದು ಕರೋಕೆ ಗಾಯನ ಸ್ಪರ್ಧೆ

ಜ್ಞಾನ ಸೌರಭ ಕಲ್ಚರಲ್ ಅಂಡ್ ಎಜ್ಯುಕೇಷನಲ್ ಟ್ರಸ್ಟ್ ವತಿಯಿಂದ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಕನ್ನಡ ಸೋಲೋ ಚಿತ್ರಗೀತೆಗಳ ಕರೋಕೆ ಗಾಯನ ಸ್ಪರ್ಧೆ ಹಾಗೂ ಉತ್ತಮ ಶಿಕ್ಷಕ ಮತ್ತು ಶಿಕ್ಷಕಿಯರಿಗೆ ಸನ್ಮಾನ ಕಾರ್ಯಕ್ರಮವು ಇಂದು ಬೆಳಿಗ್ಗೆ 10.30ಕ್ಕೆ ಆರ್.ಹೆಚ್. ಗೀತಮಂದಿರದಲ್ಲಿ ನಡೆಯಲಿದೆ.

ವಿವರಕ್ಕೆ 8219607934, 9880686866 ಸಂಪರ್ಕಿಸುವಂತೆ ಟ್ರಸ್ಟ್‌ನ ಅಧ್ಯಕ್ಷ ಡಿ. ಮಹೇಶ್ವರಪ್ಪ ತಿಳಿಸಿದ್ದಾರೆ.

## ಕೊಟ್ಟ ಮಾತಿನಂತೆ ನಾಲೆಗಳಿಗೆ ನೀರು ಬಿಡಬೇಕು: ರೇಣುಕಾಚಾರ್ಯ

ಹೊನ್ನಾಳಿ,ಸೆ.22- ಕೊಟ್ಟ ಮಾತಿನಂತೆ ಭದ್ರಾ ನಾಲೆಗಳಿಗೆ 100 ದಿನ ಸರ್ಕಾರ ನೀರು ಬಿಡುವ ಮೂಲಕ ಅಚ್ಚುಕಟ್ಟು ಭಾಗದ ರೈತರ ಹಿತ ಕಾಯ ಬೇಕು ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಒತ್ತಾಯಿಸಿದ್ದಾರೆ.

ನಾಲೆಗಳಿಗೆ ನೂರು ದಿನಗಳ ಕಾಲ ನೀರು ಬಿಡುತ್ತಾರೆಂದು ನಂಬಿ ರೈತರು ನಾಟಿ ಮಾಡಿದ್ದಾರೆ, ಆದರೆ ಸರ್ಕಾರ ಇದೀಗ ನೀರು ನಿಲ್ಲಿಸಿದ್ದು, ರೈತರನ್ನು ಸಂಕಷ್ಟಕ್ಕೆ ದೂಡುವಂತೆ ಮಾಡಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧುಬಂಗಾರಪ್ಪ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಮನವಿ ಮಾಡುತ್ತೇನೆ ಕೂಡಲೇ ಭದ್ರಾ ನಾಲೆಗಳಿಗೆ ನೀರು ಹರಿಸಬೇಕೆಂದರು.

## ರಾಣೇಬೆನ್ನೂರು ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಾಗೋಡ ವ್ಯಾಪ್ತಿಯ ಭವಾನಿ ರೈಸ್ ಮಿಲ್, ಯುಟಿಪಿ, ನಿಟ್ಟೂರು ಸ್ಕೂಲ್, ಕೆ.ಎಸ್.ಆರ್.ಟಿ.ಸಿ ಡಿಪೋ ಮತ್ತು ಕಮದೋಡ ವ್ಯಾಪ್ತಿಯ ಎಲ್ಲಾ ಸ್ಟೋನ್ ಕ್ರಷರ್, ರಿಲೆಯನ್ಸ್ ಪೆಟ್ರೋಲ್ ಬಂಕ್, ರೇನ್ ಬೋ ಸ್ಕೂಲ್, ಬಳ್ಳಾರಿ ಸ್ಕೂಲ್ ಹಾಗೂ ಹುಣಸಿಕಟ್ಟಿ ವ್ಯಾಪ್ತಿಯ ಎಲ್ಲಾ ಸ್ಟೋನ್ ಕ್ರಷರ್. ಚಳಗೇರಿ ವ್ಯಾಪ್ತಿಯ ಜೈನ್ ಸ್ಕೂಲ್ ಹಾಗೂ ಈ ಎಲ್ಲಾ ಗ್ರಾಮಗಳ ವ್ಯಾಪ್ತಿಯ ಎಲ್ಲಾ ಇಂಡಸ್ಟ್ರೀಯಲ್ ಗ್ರಾಹಕರಿಗೆ ಇಂದು ಮುಂಜಾನೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ನಗರದಲ್ಲಿ ಇಂದು ಸಭೆ

ಶ್ರೀ ಸೇವಾಲಾಲ್ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಸಂಘದ ಕಚೇರಿಯ ಆವರಣದಲ್ಲಿ ಸಂಘದ ಅಧ್ಯಕ್ಷ ಎನ್. ಹನುಮಂತನಾಯ್ಕ್ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.

## ಹೊನ್ನಾಳಿಯಲ್ಲಿ ಇಂದು ಪಂಚಾಮಸಾಲಿ ಸಮಾಜದ ರಾಜ್ಯ ಕಾರ್ಯಕಾರಿಣಿ ಸಭೆ

ಹೊನ್ನಾಳಿ, ಸೆ. 22- ಪಂಚಮಸಾಲಿ ಸಮಾಜದ ರಾಜ್ಯ ಕಾರ್ಯಕಾರಿಣಿ ಹಾಗೂ ಸರ್ವ ಸದಸ್ಯರ ಸಭೆಯು ನಾಳೆ ದಿನಾಂಕ 23 ರ ಶನಿವಾರ ಹಿರೇಕಲ್ಮಠದ ಸಮುದಾಯ ಭವನದಲ್ಲಿ ನಡೆಯಲಿದೆ ಎಂದು ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ ಹೇಳಿದರು.

ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆದ ಹೊನ್ನಾಳಿ ಹಾಗೂ ನ್ಯಾಮತಿ ಅವಳಿ ತಾಲ್ಲೂಕು ಸಮಾಜದ ಮುಖಂಡರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಮಾಜದ ಗೌರವಾಧ್ಯಕ್ಷ ಡಾ.ರಾಜಕುಮಾರ್ ಮಾತನಾಡಿ, ಈ ಸಭೆಯಲ್ಲಿ 1500 ಸದಸ್ಯರು ಬರುವ ನಿರೀಕ್ಷೆ ಇದೆ ಎಂದರು. ರಾಜ್ಯ ಸ.ಕಾರ್ಯದರ್ಶಿ ದಾವಣಗೆರೆ ಲೋಕೇಶ್ ಮಾತನಾಡಿದರು.

ಈ ಸಂದರ್ಭದಲ್ಲಿ ಸಮಾಜದ ರಾಜ್ಯ ಉಪಾಧ್ಯಕ್ಷ ಪರಮೇಶ ಪಟ್ಟಣಶೆಟ್ಟಿ, ಜಿಲ್ಲಾ ಸಮಿತಿಯ ನ್ಯಾಮತಿ ಪಂಚಣ್ಣ, ನ್ಯಾಮತಿ ತಾಲ್ಲೂಕು ಚಂದ್ರಶೇಖರ ಪೂಜಾರ, ವಾಗೀಶ, ಮಹಿಳಾ ಅಧ್ಯಕ್ಷ ಶಿಲ್ಪಾ ರಾಜುಗೌಡ, ಸಮಾಜದ ಮುಖಂಡರಾದ ಕುಂಕೋದ್ ಸೋಮಣ್ಣ, ಹಾಲೇಶ, ಯುವ ಘಟಕದ ಅಧ್ಯಕ್ಷ ಹಾಲೇಶ, ನಗರ ಘಟಕದ ಅಧ್ಯಕ್ಷ ಗಿರೀಶ ಸೇರಿದಂತೆ ಸಮಾಜದ ಮುಖಂಡರು ಇದ್ದರು.

## ಕೊಕ್ಕನೂರು ಶಾಲೆ ವಿದ್ಯಾರ್ಥಿ ಕಾರ್ತಿಕ್ ರಾಜ್ಯ ಮಟ್ಟಕ್ಕೆ ಆಯ್ಕೆ



ಮಲೇಬೆನ್ನೂರು, ಸೆ.22- ಕೊಕ್ಕನೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿ ಎ.ಸಿ. ಕಾರ್ತಿಕ್ ಇವನು ದಾವಣಗೆರೆಯ ಸಿದ್ಧಗಂಗಾ ಶಾಲೆಯಲ್ಲಿ ನಡೆದ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ವಿಜ್ಞಾನ ಶಿಕ್ಷಕ ನೂಲಗೇರಿ ಅವರು ಕಾರ್ತಿಕ್‌ಗೆ ಮಾರ್ಗದರ್ಶನ ನೀಡಿದ್ದರು. ಇದೇ ಶಾಲೆಯ ವಿದ್ಯಾರ್ಥಿಳಾದ ಟಿ. ಸುರೇಖಾ ಮತ್ತು ಡಿ. ಮಹಾಂತೇಶ್ ಇವರು ಹರಿಹರದಲ್ಲಿ ಇತ್ತೀಚೆಗೆ ಜರುಗಿದ ತಾ. ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಗಳಿಸಿದ್ದರು.

## ಪೌರಕಾರ್ಮಿಕರಿಗೆ ಕ್ರೀಡಾ ಸ್ಪರ್ಧೆ



ದಾವಣಗೆರೆ, ಸೆ.22- ಪೌರ ಕಾರ್ಮಿಕ ದಿನಾಚರಣೆ ಅಂಗವಾಗಿ ಮಹಾನಗರ ಪಾಲಿಕೆಯ 800 ಕ್ಕೂ ಅಧಿಕ ಪೌರ ಕಾರ್ಮಿಕರು ಹಾಗೂ ಇತರೆ ಸ್ವಚ್ಛತಾ ಕಾರ್ಮಿಕರುಗಳಿಗೆ ಉಚಿತ ನೇತ್ರ ತಪಾಸಣಾ ಶಿಬಿರ ಹಾಗೂ ವಿವಿಧ ಕ್ರೀಡಾ ಚಟುವಟಿಕೆಗಳನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಜಗದೀಶ್, ಉಪ ಮಹಾಪೌರರಾದ ಶ್ರೀಮತಿ ಯಶೋಧ ಯಗ್ಗಪ್ಪ ಅವರು ಉದ್ಘಾಟಿಸಿದರು.

ಪಾಲಿಕೆಯ ಸದಸ್ಯರಾದ ಚಮನ್ ಸಾಬ್, ಮಂಜುನಾಥ ಗಡಿಗುಡಾಳ್ ಉಪಸ್ಥಿತರಿದ್ದರು. ಖಾಯಂ ಹಾಗೂ ಹೊರಗುತ್ತಿಗೆ ಪೌರ ಕಾರ್ಮಿಕರುಗಳಿಗೆ ಲೆಮನ್ ಅಂಡ್ ಸ್ಪೂನ್, ಮ್ಯೂಸಿಕಲ್ ಛೇರ್, ಹಗ್ಗ ಜಗ್ಗಾಟ, ಶಾಟ್ ಪುಟ್, ಕಬಡ್ಡಿ, 100 ಮೀಟರ್ ಓಟ ಹಾಗೂ ಇತರೆ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

## ನಂದಗೋಕುಲ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಠಮಿ



ದಾವಣಗೆರೆ, ಸೆ. 22 - ನಗರದ ನಂದಗೋಕುಲ ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ, ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಕೃಷ್ಣ ಜನ್ಮಾಷ್ಠಮಿ ಆಚರಿಸಲಾಯಿತು. ಶಾಲೆಯ ನರ್ಸರಿ ವಿಭಾಗದ ವಿದ್ಯಾರ್ಥಿಗಳು ಕೃಷ್ಣ, ರಾಧೆ ಹಾಗೂ ರುಕ್ಮಿಣಿ ವೇಷ ಧರಿಸಿ, ಶಾಲೆಗೆ ಆಗಮಿಸಿ, ಕಾರ್ಯಕ್ರಮಕ್ಕೆ ಮೆರುಗು ಹೆಚ್ಚಿಸಿದರು.

ಈ ಸಂದರ್ಭದಲ್ಲಿ ಶಾಲಾ ಕಾರ್ಯದರ್ಶಿ ಶ್ರೀಮತಿ ಬಿ. ಅನುಸೂಯ ಮತ್ತು ಮುಖ್ಯ ಶಿಕ್ಷಕರಾದ ಶ್ರೀಮತಿ ರೆಹನಾ ಬಾನು ನಾಸಿಕ ಹಾಗೂ ಎಲ್ಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

### ಹಳೇ ಕುಂದುವಾಡ ಹಂಚಿನಮನೆ ಶಾರದಮ್ಮ ನಿಧನ



ದಾವಣಗೆರೆ ನಗರದ ಹಳೇ ಕುಂದುವಾಡ ನಿವಾಸಿ ದಿವಂಗತ ಹಂಚಿನಮನೆ ಶರಣಪ್ಪ ಇವರ ಧರ್ಮಪತ್ನಿ ಹಂಚಿನಮನೆ ಶಾರದಮ್ಮ (72) ಇವರು ದಿನಾಂಕ 22.09.2023ರ ಶುಕ್ರವಾರ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.09.2023ರ ಶನಿವಾರ ಬೆಳಿಗ್ಗೆ 10ಗಂಟೆಗೆ ಹಳೇ ಕುಂದುವಾಡ ರುದ್ರಭೂಮಿಯಲ್ಲಿ ನೆರವೇರಲಿದೆ.

# ನಗರದಲ್ಲಿ ನಾಳೆ ಪಿಜಿಸಿಇಟಿ ಪರೀಕ್ಷೆ : ಎಡಿಸಿ ಪಿ.ಎನ್.ಲೋಕೇಶ್



ದಾವಣಗೆರೆ, ಸೆ. 22- ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಎಂ.ಸಿ.ಎ ಮತ್ತು ಎಂ.ಬಿ.ಎ ಕೋರ್ಸ್‌ಗಳ ಪ್ರವೇಶಾತಿಯ ಪಿಜಿಸಿಇಟಿ ಪ್ರವೇಶ ಪರೀಕ್ಷೆಯು ನಾಡಿದ್ದು ದಿನಾಂಕ 24ರಂದು ನಗರದ 5 ಕೇಂದ್ರಗಳಲ್ಲಿ ನಡೆಯಲಿದ್ದು, ಯಾವುದೇ ಲೋಪ ದೋಷಗಳಾಗದಂತೆ ಪರೀಕ್ಷೆ ನಡೆಸಲು ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದರು.

ಜಿಲ್ಲಾಡಳಿತ ಭವನದ ಅಪರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜರುಗಿದ ಪರೀಕ್ಷೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಂ.ಸಿ.ಎ ಮತ್ತು ಎಂ.ಬಿ.ಎ ಕೋರ್ಸ್‌ಗಳ ಪ್ರವೇಶಾತಿಯ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯನ್ನು 3547 ಅಭ್ಯರ್ಥಿಗಳು ಬರೆಯಲಿದ್ದು, ನಗರದ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಅಥಣಿ ಪಿ.ಯು ಕಾಲೇಜು ಮತ್ತು ಸೆಂಟ್ ಪಾಲ್ಸ್ ಪಿ.ಯು ಕಾಲೇಜು ಸೇರಿ, ಒಟ್ಟು 5 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿವೆ ಎಂದರು.

ಎಂ.ಸಿ.ಎ ಕೋರ್ಸ್‌ಗೆ ಸಂಬಂಧಿಸಿದ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಹಾಗೂ ಎಂ.ಬಿ.ಎ ಕೋರ್ಸ್‌ಗೆ ಸಂಬಂಧಿಸಿದ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಯು ಮಧ್ಯಾಹ್ನ 2.30 ರಿಂದ 4.30 ರವರೆಗೆ ನಡೆಯಲಿದೆ ಎಂದು ಅವರು ವಿವರಿಸಿದರು.

ಡಿ.ಡಿ.ಪಿ.ಐ ಕೊಟ್ರೇಶ್, ಡಿ.ಡಿ.ಪಿ.ಯು ಅಧಿಕಾರಿ ಕರಿಬಸಪ್ಪ, ಬಿ.ಇ.ಓ ಶೇರ್‌ಆಲಿ ಹಾಗೂ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಪಿ. ರಮೇಶ್ ಉಪಸ್ಥಿತರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪಡಿತರ ಆಹಾರ ಧಾನ್ಯ ಹಂಚಿಕೆ

ದಾವಣಗೆರೆ, ಸೆ. 22 - ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಜಿಲ್ಲೆಯಲ್ಲಿನ ಪಡಿತರ ಚೀಟಿದಾರರಿಗೆ ಸೆಪ್ಟೆಂಬರ್ ಮಾಹೆಗೆ ಅನ್ವಯವಾಗುವಂತೆ ಪಡಿತರ ಧಾನ್ಯವನ್ನು ಹಂಚಿಕೆ ಮಾಡಲಾಗಿದೆ.

ಅಂತ್ಯೋದಯ ಪಡಿತರ ಚೀಟಿದಾರರಿಗೆ 21 ಕೆ.ಜಿ ಅಕ್ಕಿ ಮತ್ತು ರಾಗಿ 14 ಕೆ.ಜಿ ಪ್ರತಿ ಕಾರ್ಡ್‌ಗೆ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 3 ಕೆ.ಜಿ ಅಕ್ಕಿ ಮತ್ತು ಪ್ರತಿ ಸದಸ್ಯರಿಗೆ 2 ಕೆ.ಜಿ ರಾಗಿ ಉಚಿತವಾಗಿ ವಿತರಿಸಲಾಗುತ್ತದೆ. ಹಾಗೂ ಪ್ರತಿ ಕೆ.ಜಿ ಗೆ ರೂ.15ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್ ಏಕ ಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ, ಎರಡು ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ಗ್ಯಾರಂಟಿ ಯೋಜನೆಯಡಿ ಆದ್ಯತಾ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ ಮತ್ತು ಅಂತ್ಯೋದಯ ಪಡಿತರ ಚೀಟಿಯ 3 ಕ್ಕಿಂತ ಹೆಚ್ಚಿನ ಪ್ರತಿ ಸದಸ್ಯರಿಗೆ ರಾಜ್ಯ ಸರ್ಕಾರದ 5 ಕೆ.ಜಿ ಹೆಚ್ಚುವರಿ ಅಕ್ಕಿಯ ಬದಲು ವ್ಯಕ್ತಿಗೆ ತಲಾ 170 ನಂತೆ ಲಿಂಕ್ ಆಗಿರುವ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಡಿ.ಬಿ.ಟಿ ಮೂಲಕ ಹಣ ಜಮೆ ಮಾಡಲಾಗುತ್ತಿದೆ. ಈ ಕುರಿತು ತಾಂತ್ರಿಕ ದೋಷಗಳಿದ್ದಲ್ಲಿ ಬ್ಯಾಂಕ್ ಶಾಖೆಗಳಿಗೆ ಅಥವಾ ಆಹಾರ ನಿರೀಕ್ಷಕರನ್ನು ಸಂಪರ್ಕಿಸಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಜಿಲ್ಲಾ ಆಹಾರ ನಾಗರಿಕರ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

# ದೊಡ್ಡಪೇಟೆಯಲ್ಲಿ ಇಂದು ಅನ್ನಸಂತರ್ಪಣೆ

ದೊಡ್ಡಪೇಟೆಯ ಶ್ರೀ ವಿನಾಯಕ ದೇವಸ್ಥಾನ ಸೇವಾ ಸಂಘ ಟ್ರಸ್ಟ್ ಆಶ್ರಯದಲ್ಲಿ ವಿನಾಯಕ ಮಹೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 12.30 ರಿಂದ ದಾಸೋಹ ನಡೆಯಲಿದೆ. ಅಜ್ಜಂಪುರದ ಗೋವಿಂದಸ್ವಾಮಿ ಜ್ಞಾಪಕಾರ್ಥ ಅಜ್ಜಂಪುರ ಮಂಜುನಾಥ ಮತ್ತು ಮಕ್ಕಳು (ಶ್ರೀ ಲಿಂಗೇಶ್ವರ ಅಂಡ್ ಕೋ) ಸೇವಾರ್ಥಿಗಳಾಗಿದ್ದಾರೆ.

# ಶ್ರೀ ನಂದಿ ಸೌಹಾರ್ದ ಸಹಕಾರಿ ನಿ., ಮಲೇಬೆನ್ನೂರು.

ಪ್ರಧಾನ ಕಛೇರಿ, ಮಲೇಬೆನ್ನೂರು, ಶಾಖೆಗಳು : ನಂದಿಗುಡಿ, ತಿಳುವಳ್ಳಿ.

## ಸೌಹಾರ್ದ ಸಹಕಾರಿಯ 2022-2023ನೇ ಸಾಲಿನ 4ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ

ನಮ್ಮ ಸಹಕಾರಿಯ 2022-23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ : 24.09.2023ನೇ ಭಾನುವಾರ ಮಧ್ಯಾಹ್ನ 2.30 ಗಂಟೆಗೆ ಮಲೇಬೆನ್ನೂರಿನ ಜಿಗಳಿ ರಸ್ತೆಯಲ್ಲಿರುವ ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆ (ರಿ.) ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹೆಚ್.ಟಿ. ಶಾಂತನಗೌಡ್ರು ಇವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆದ್ದರಿಂದ ಮಾನ್ಯ ಸರ್ವಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

### ಆರ್ಥಿಕ ಪ್ರಗತಿಯ ಪಕ್ಷಿನೋಟ

| ವಿವರಗಳು | ದಿನಾಂಕ : 2021-22ಕ್ಕೆ | ದಿನಾಂಕ : 2022-23ಕ್ಕೆ |
|---|---|---|
| 1) ಷೇರು ಬಂಡವಾಳ | 80,88,300 | 10,03,343 |
| 2) ಸದಸ್ಯರ ಸಂಖ್ಯೆ | 2763 | 3234 |
| 3) ಠೇವಣಿಗಳು | 4,64,33,121 | 5,58,73,619 |
| 4) ನಂದಿ ನಿತ್ಯನಿಧಿ | 3,23,14,275 | 3,43,73,897 |
| 5) ಕಾಯ್ದಿಟ್ಟ ನಿಧಿ | 82,91,282 | 89,99,496 |
| 6) ಇತರೆ ನಿಧಿಗಳು | 1,88,86,096 | 2,03,37,822 |
| 7) ಸದಸ್ಯರಿಗೆ ಸಾಲಗಳು | 10,56,53,828 | 12,27,05,236 |
| 8) ದುಡಿಯುವ ಬಂಡವಾಳ | 16,45,34,323 | 18,42,54,434 |
| 9) ಲಾಭ | 27,62,888 | 32,99,981 |
| 10) ಆಡಿಟ್ ಶ್ರೇಣಿ | 'ಬಿ' | 'ಬಿ' |
| 11) ಸದಸ್ಯರಿಗೆ ಡಿವಿಡೆಂಡ್ | 12% | 12% ಉದ್ದೇಶಿತ |

### ಸಂಘದ ಆಡಳಿತ ಮಂಡಳಿ



ಹೆಚ್.ಟಿ. ಶಾಂತನಗೌಡ, ಅಧ್ಯಕ್ಷರು, ಹಳ್ಳಿಹಾಳ್. ಎಂ.ವಿ. ನಾಗರಾಜ್, ಉಪಾಧ್ಯಕ್ಷರು, ಜಿಗಳಿ. ಇಂದೂಧರ ಎನ್. ರುದ್ರಗೌಡ, ನಿರ್ದೇಶಕರು, ಜಿಗಳಿ. ಹೆಚ್. ವೀರನಗೌಡ್ರು, ನಿರ್ದೇಶಕರು, ಹಳ್ಳಿಹಾಳ್. ಬಿ. ಬಸವರಾಜಪ್ಪ, ನಿರ್ದೇಶಕರು, ಜಿಗಳಿ.

ಹೆಚ್.ಟಿ. ಪರಮೇಶ್ವರಪ್ಪ, ನಿರ್ದೇಶಕರು, ಹಳ್ಳಿಹಾಳ್. ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ, ನಿರ್ದೇಶಕರು, ಜಿ.ಬೇವಿನಹಳ್ಳಿ. ಶ್ರೀಮತಿ ಭಾಗ್ಯ ಉದಯಗೌಡ, ನಿರ್ದೇಶಕರು, ಹಿಂಡಸಘಟ್ಟ. ಬಿ.ಹೆಚ್. ರವಿ, ನಿರ್ದೇಶಕರು, ಕೊಕ್ಕನೂರು. ಕೆ.ಹೆಚ್. ಆಂಜನೇಯ, ನಿರ್ದೇಶಕರು, ಕೊಕ್ಕನೂರು.

ಸಂತೋಷ್ ಪಾಳೇದ, ನಿರ್ದೇಶಕರು, ಜಿ.ಬೇವಿನಹಳ್ಳಿ. ಎ. ಆರೀಫ್ ಅಲಿ, ನಿರ್ದೇಶಕರು, ಮಲೇಬೆನ್ನೂರು. ಟಿ. ರಾಮಚಂದ್ರಪ್ಪ, ನಿರ್ದೇಶಕರು, ಕೊಕ್ಕನೂರು. ಆರ್. ನಾಗರಾಜ, ನಿರ್ದೇಶಕರು, ಕೊಕ್ಕನೂರು. ಎ.ಕೆ. ತಿಪ್ಪೇಶಪ್ಪ, ನಿರ್ದೇಶಕರು, ಹಳ್ಳಿಹಾಳ್.

ಸೂಚನೆ: ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯ ಪ್ರಕಾರ ಸಹಕಾರಿ ಸದಸ್ಯರು ಸಹಕಾರಿಯ 05 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ ಯಾವುದೇ 02 ಮಹಾಸಭೆಗಳಿಗೆ ಹಾಜರಾಗುವುದು ಹಾಗೂ ಕನಿಷ್ಠ 02 ವರ್ಷಗಳಲ್ಲಿ ಕನಿಷ್ಠ 1000/- ರೂಪಾಯಿಗಳ ವ್ಯವಹಾರವನ್ನು ಮಾಡುವುದು ಕಡ್ಡಾಯ. ಇವುಗಳನ್ನು ಪಾಲಿಸದೇ ಇದ್ದಲ್ಲಿ ಮುಂಬರುವ ಆಡಳಿತ ಮಂಡಲಿಯ ಚುನಾವಣೆಯಲ್ಲಿ ಪಾಲ್ಗೊಳ್ಳಲು ಹಾಗೂ ಮತ ಚಲಾಯಿಸಲು ಅನರ್ಹರಾಗುತ್ತಾರೆ.

ವಿ.ಸೂ.:- ಈಗಾಗಲೇ ಸಹಕಾರಿಯ ಎಲ್ಲಾ ಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ಮಹಾಸಭೆಗೆ ಬರುವಾಗ ಮಾನ್ಯ ಸದಸ್ಯರು ಆಹ್ವಾನ ಪತ್ರಿಕೆಯನ್ನು ತಪ್ಪದೇ ತರತಕ್ಕದ್ದು, ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನ ಪತ್ರವೆಂದು ಭಾವಿಸಿ ಆಗಮಿಸಲು ಕೋರಿದೆ.

# ದಲ್ಲಾಲರ ಸಂಘ (ರಿ.)

ಎ.ಪಿ.ಎಂ.ಸಿ. ಯಾರ್ಡ್, ದಾವಣಗೆರೆ - 577 003.

## 48ನೇ ವಾರ್ಷಿಕ ಮಹಾಸಭೆ ಆಮಂತ್ರಣ ಪತ್ರಿಕೆ



ಎಸ್.ಟಿ. ಕುಸುಮಶೆಟ್ರು, ಗೌರವಾಧ್ಯಕ್ಷರು. ಶ್ರೀ ಜಿ.ಎಸ್. ಪರಮೇಶ್ವರಗೌಡ್ರು, ಗೌರವಾಧ್ಯಕ್ಷರು.

ಮಾನ್ಯ ದಲ್ಲಾಲರ ಬಂಧುಗಳೇ,
ನಮ್ಮ ಸಂಘದ 2022-23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 23.09.2023ನೇ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಎಪಿಎಂಸಿ ಯಾರ್ಡ್‌ನಲ್ಲಿರುವ ದಲ್ಲಾಲರ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕಂಸಾಗರದ ಪಂಚಾಕ್ಷರಪ್ಪನವರು ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಸರಿಯಾಗಿ ಆಗಮಿಸಿ, ಸಭೆಯನ್ನು ನಡೆಸಿಕೊಡಬೇಕಾಗಿ ವಿನಂತಿ.



ಶ್ರೀ ಕಂಸಾಗರದ ಪಂಚಾಕ್ಷರಪ್ಪ, ಅಧ್ಯಕ್ಷರು. ಶ್ರೀ ಹೆಚ್.ಎಂ. ಬಸವರಾಜಪ್ಪ, ಉಪಾಧ್ಯಕ್ಷರು. ಶ್ರೀ ಬಿ.ಜಿ. ಹಾಲೇಶ್, ಉಪಾಧ್ಯಕ್ಷರು. ಶ್ರೀ ಹೆಚ್. ದಯಾನಂದ, ಕಾರ್ಯದರ್ಶಿ. ಶ್ರೀ ಅಣಬೇರು ಜಗದೀಶ್, ಸಹ ಯರ್ದರ್ಶಿಗಳು. ಶ್ರೀ ಕೆ.ಜಿ. ಬಸವರಾಜ್, ಸಹ ಕಾರ್ಯದರ್ಶಿಗಳು.

ಶ್ರೀ ಕಬ್ಬೂರು ಕೆ.ಜಿ. ಪ್ರಕಾಶ್, ಕೋಶಾಧ್ಯಕ್ಷರು. ಶ್ರೀ (BNT) ಸದಾನಂದ, ಸದಸ್ಯರು. ಶ್ರೀ ಹೆಚ್.ಜಿ. ನಾಗೇಂದ್ರಪ್ಪ, ಸದಸ್ಯರು. ಶ್ರೀ ಕೆ. ರಾಜಗೋಪಾಲರೆಡ್ಡಿ, ಸದಸ್ಯರು. ಶ್ರೀ ಬೇತೂರು ಎಂ. ರೇವಣಸಿದ್ದಪ್ಪ, ಸದಸ್ಯರು. ಶ್ರೀ ಮಾಗಾನಹಳ್ಳಿ ಸೋಮಶೇಖರಪ್ಪ, ಸದಸ್ಯರು.

ಶ್ರೀ ಡಿ. ಸುರೇಂದ್ರಪ್ಪ, ಸದಸ್ಯರು. ಶ್ರೀ ಬೊಮ್ಮೇನಹಳ್ಳಿ ಲಿಂಗರಾಜ್, ಸದಸ್ಯರು. ಶ್ರೀ ಸಿಂಗ್ರಿಹಳ್ಳಿ ಈ. ಷಣ್ಮುಖಪ್ಪ, ಸದಸ್ಯರು. ಶ್ರೀ ದೊಗ್ಗಳ್ಳಿ ಬಸವರಾಜ್, ಸದಸ್ಯರು. ಶ್ರೀ ದೊಗ್ಗಳ್ಳಿ ಮಲ್ಲಿಕಾರ್ಜುನ್, ಸದಸ್ಯರು. ಶ್ರೀ ಕಾವಲಹಳ್ಳಿ ಜಗದೀಶ್, ಸದಸ್ಯರು.

ಶ್ರೀ ಎಂ.ಬಿ. ಶಿವಮೂರ್ತಿ, ಸದಸ್ಯರು. ಶ್ರೀ ಎನ್.ಟಿ. ನಾಗರಾಜ್, ಸದಸ್ಯರು. ಶ್ರೀ ಕೆ.ಜಿ. ಸುರೇಂದ್ರ, ಸದಸ್ಯರು. ಶ್ರೀ ದರ್ಶನ್ ಎಂ., ಸದಸ್ಯರು. ಶ್ರೀ ಮುದೇಗೌಡ್ರು ಬಕ್ಕೇಶ್, ಸದಸ್ಯರು.

# ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ

# ಎನ್.ಎಫ್-01, 02, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್,
1ನೇ ಮಹಡಿ, ನಿಟುವಳ್ಳಿ ರಸ್ತೆ, ದಾವಣಗೆರೆ-577 002. ಫೋ. : 08192 232377.

## 7ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಮಹಾಸಭೆ

ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ ದಾವಣಗೆರೆ ಇದರ 2022-2023ನೇ 7ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 23.09.2023ನೇ ಶನಿವಾರದಂದು ಬೆಳಿಗ್ಗೆ 11.30 ಗಂಟೆಗೆ ಶ್ರೀ ಶಂಕರ ಭಾರತಿ ಮಂದಿರ (ಶಂಕರ ಮಠ), ಜಯದೇವ ಸರ್ಕಲ್, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

### ನಿರ್ದೇಶಕರ ಮಂಡಳಿ



ಬಿ. ಸುರೇಶ್ ಹಾಲೇಕಲ್ಲು, ಅಧ್ಯಕ್ಷರು. ಜೆ.ಕೆ. ಶಿವಕುಮಾರ್, ಉಪಾಧ್ಯಕ್ಷರು. ಕೆ.ಹೆಚ್. ಶಿವಯೋಗಪ್ಪ, ನಿರ್ದೇಶಕರು. ಆರ್.ಎನ್. ಮಾರುತಿ, ನಿರ್ದೇಶಕರು. ಎನ್. ರಾಜಣ್ಣ, ನಿರ್ದೇಶಕರು. ಹೆಚ್.ಬಿ. ಮಂಜುನಾಥ್, ನಿರ್ದೇಶಕರು. ಎಸ್.ವಿ. ರುದ್ರಮುನಿ, ನಿರ್ದೇಶಕರು. ಟಿ. ಮಹಾಂತೇಶ್, ನಿರ್ದೇಶಕರು. ಎಂ.ಹೆಚ್.ರಾಜಪ್ಪ, ನಿರ್ದೇಶಕರು. ಮಲ್ಲಿಕಾರ್ಜುನ್ ಪಿ. ವಾಲಿ, ನಿರ್ದೇಶಕರು. ಶ್ರೀಮತಿ ಆಶಾ ಕೃಷ್ಣಮೂರ್ತಿ, ನಿರ್ದೇಶಕರು. ಶ್ರೀಮತಿ ಹೆಚ್.ಟಿ. ಶ್ವೇತಾ, ನಿರ್ದೇಶಕರು. ಆರ್. ವೆಂಕಟಾಚಲಮೂರ್ತಿ, ಮುಖ್ಯ ಕಾರ್ಯನಿರ್ವಾಹಕರು.

### ದಿನಾಂಕ : 31.03.2023 ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

| ಕ್ರ.ಸಂ. | ಜವಾಬ್ದಾರಿಗಳ ವಿವರ | ಮೊಬಲಗು | ಮೊಬಲಗು |
|---|---|---|---|
| 01) | ಷೇರು ಬಂಡವಾಳ : | | 19,92,700-00 |
| | ಸದಸ್ಯರಿಂದ | 17,99,000-00 | |
| | ಸಹ ಸದಸ್ಯರಿಂದ | 1,93,700-00 | 84,16,724-45 |
| 02) | ನಿಧಿಗಳು : | | |
| | ಆಪದ್ಧನ ನಿಧಿ | 24,87,086-45 | |
| | ಕಟ್ಟಡ ನಿಧಿ | 22,63,148-00 | |
| | ಕರಡು ಸಾಲದ ನಿಧಿ | 18,74,481-00 | |
| | ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 8,91,976-00 | |
| | ಸಾಮಾಜಿಕ ಕ್ಷೇಮಾಭಿವೃದ್ಧಿ ನಿಧಿ | 7,95,170-00 | |
| | ಜ್ಯುಬಿಲಿ ನಿಧಿ | 1,12,663-00 | |
| | ಸದಸ್ಯರ ಮರಣೋತ್ತರ ನಿಧಿ | 1,29,150-00 | |
| | ಲಾಭಾಂಶ ಸಮೀಕರಣ ನಿಧಿ | 1,12,663-00 | |
| | ಪ್ರಚಾರ ನಿಧಿ | 50,387-00 | |
| 03) | ಠೇವಣಿಗಳು : | | 7,51,54,246-00 |
| | ಸದಸ್ಯರ ಉಳಿತಾಯ ಖಾತೆ | 33,26,955-00 | |
| | ಚಾಲ್ತಿ ಖಾತೆ | 14,404-00 | |
| | ಎಮ್.ಎಫ್.ಎಲ್. ಭದ್ರತಾ ಠೇವಣಿ | 2,48,898-00 | |
| | ಕಲ್ಪ ವೃಕ್ಷ ಭದ್ರತಾ ಠೇವಣಿ | 6,21,936-00 | |
| | ಶ್ರೀ ಜಯದೇವ ನಿಧಿ ಕ್ಯಾಷ್ ಸರ್ಟಿಫಿಕೇಟ್ | 2,37,42,767-00 | |
| | ಖಾಯಂ ಠೇವಣಿ | 2,94,65,314-00 | |
| | ಪಿಗ್ಮಿ ಠೇವಣಿ | 1,44,74,889-00 | |
| | ಕಲ್ಪ ವೃಕ್ಷ ಅಮಾನತ್ತು ಠೇವಣಿ | 29,160-00 | |
| | ಸಿಬ್ಬಂದಿ ಭದ್ರತಾ ಠೇವಣಿ | 1,12,133-00 | |
| | ಸಂಚಿತ ಠೇವಣಿ | 25,02,333-00 | |
| | ವೆಜಿಟಬಲ್ ಸುರಕ್ಷಾ ಠೇವಣಿ | 38,000-00 | |
| | ವಿಶೇಷ ಖಾಯಂ ಠೇವಣಿ | 5,77,457-00 | |
| 04) | ಇತರೆ ಜವಾಬ್ದಾರಿಗಳು : | | 12,36,161-00 |
| | ಸಿಬ್ಬಂದಿ ಗ್ರಾಚ್ಯುಟಿ | 55,000-00 | |
| | ಅಮಾನತ್ತು ಖಾತೆ | 10,624-00 | |
| | ಸದಸ್ಯತ್ವ ಲಾಭಾಂಶ | 2,72,498-00 | |
| | ಷೇರು ಅಮಾನತ್ತು | 10,840-00 | |
| | ಲೆಕ್ಕ ಪರಿಶೋಧನಾ ಶುಲ್ಕ | 30,000-00 | |
| | ಸಿಜಿಎಸ್ಟಿ ಖಾತೆ | 13,546-00 | |
| | ಕೊಡತಕ್ಕ ಬಡ್ಡಿ | 6,41,207-00 | |
| | ದೇವೇಂದ್ರಪ್ಪ ಅಮಾನತ್ತು ಖಾತೆ | 2,500-00 | |
| | ಶೀತಲ್ ಅಮಾನತ್ತು ಖಾತೆ | 300-00 | |
| | ವಿಮಲರಾವ್ ಅಮಾನತ್ತು ಖಾತೆ | 900-00 | |
| | ಎ.ಜಿ. ವೀರಣ್ಣ ಅಮಾನತ್ತು ಖಾತೆ | 500-00 | |
| | Prov. on Comp H/W and S/W | 1,84,700-00 | |
| | ಎಸ್.ಜಿ.ಎಸ್.ಟಿ. ಖಾತೆ | 13,546-00 | |
| 05 | ನಿವ್ವಳ ಲಾಭ | | 23,54,087-40 |
| | ಒಟ್ಟು | | 8,91,53,918-85 |

| ಕ್ರ.ಸಂ. | ಆಸ್ತಿಗಳ ವಿವರ | ಮೊಬಲಗು | ಮೊಬಲಗು |
|---|---|---|---|
| 01) | ಕೈಯಲ್ಲಿ ನಗದು ಶಿಲ್ಕು | | 5,15,614-00 |
| 02) | ಬ್ಯಾಂಕ್ ಖಾತೆಗಳು : | | 86,74,105-35 |
| | ಡಿ.ಹೆಚ್.ಯು.ಎಸ್. ಬ್ಯಾಂಕ್ ಚಾಲ್ತಿ ಖಾತೆ | 17,35,881-20 | |
| | ದಾ.ಜಿ.ಕೇ.ಸ. ಬ್ಯಾಂಕ್ ಚಾಲ್ತಿ ಖಾತೆ | 3,603-25 | |
| | ಏಕ್ಸಿಸ್ ಬ್ಯಾಂಕ್ ಚಾಲ್ತಿ ಖಾತೆ | 95,999-30 | |
| | ಆರ್.ಬಿ.ಎಲ್. ಬ್ಯಾಂಕ್ ಚಾಲ್ತಿ ಖಾತೆ | 7,20,025-60 | |
| | ಶ್ರೀ ಬೀ.ಕ್ರೆ.ಸ.ಸಂಘ ಉಳಿತಾಯ ಖಾತೆ | 2,68,596-00 | |
| | ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ | 58,50,000-00 | |
| 03) | ವಿನಿಯೋಗಗಳು : | | 2,16,10,856-00 |
| | ಡಿ.ಹೆಚ್.ಯು,ಎಸ್. ಬ್ಯಾಂಕ್ ಖಾಯಂ ಠೇವಣಿ | 2,00,59,856-00 | |
| | ದಾ.ಜಿ.ಸೌ. ಒಕ್ಕೂಟ ಷೇರು ಖಾತೆ | 50,000-00 | |
| | ಶ್ರೀ ಬೀ.ಕ್ರೆ.ಸ.ಸಂಘ ಖಾಯಂ ಠೇವಣಿ | 15,01,000-00 | |
| 04) | ಸದಸ್ಯರ ಸಾಲದ ಖಾತೆಗಳು : | | 5,68,44,457-00 |
| | ಕಟ್ಟಡ ಸಾಲ | 52,49,074-00 | |
| | ವಾಹನ ಸಾಲ | 170,90,701-00 | |
| | ಕಂತಿನ ಸಾಲ | 1,46,47,818-00 | |
| | ಸೆ.ಕ್ಯಾ.ಕ್ರೆ.ಸಾಲ | 30,48,151-00 | |
| | ಅಡವು ಸಾಲ | 84,89,729-00 | |
| | ಮೈಕ್ರೊ ಫೈನಾನ್ಸ್ ಸಾಲ | 61,96,645-00 | |
| | ಪಿಗ್ಮಿ ಆಧಾರಿತ ಸಾಲ | 7,50,888-00 | |
| | ಕ್ಯಾ.ಕ್ರೆ. ಆಧಾರಿತ ಸಾಲ | 3,99,600-00 | |
| | ಖಾಯಂ ಠೇವಣಿ ಆಧಾರಿತ ಸಾಲ | 9,28,851-00 | |
| | ಸಂಚಿತ ಠೇವಣಿ ಆಧಾರಿತ ಸಾಲ | 43,000-00 | |
| 05) | ಚರಾಸ್ತಿಗಳು : | | 4,99,340-50 |
| | ಪಿಠೋಪಕರಣಗಳು | 2,80,940-00 | |
| | ಕಂಪ್ಯೂಟರ್ ಸಾಫ್ಟ್‌ವೇರ್ | 1,02,000-00 | |
| | ಕಂಪ್ಯೂಟರ್ ಹಾರ್ಡ್‌ವೇರ್ | 14,940-00 | |
| | ಯುಪಿಎಸ್ ಮತ್ತು ಬ್ಯಾಟರಿ | 32,237-00 | |
| 06) | ಪುಸ್ತಕ ಮತ್ತು ಫಾರಂ | 69,223-50 | |
| | ಇತರೆ ಮುಂಗಡಗಳು | | 10,09,546-00 |
| | ಟಿಡಿಎಸ್ ಕಡಿತ ಹಣ | 9,546-00 | |
| | ಕಛೇರಿ ಮುಂಗಡ | 10,00,000-00 | |
| | ಒಟ್ಟು | | 8,91,53,918-85 |

### ದಿನಾಂಕ : 31.03.2023 ಕ್ಕೆ ಇದ್ದಂತೆ ಲಾಭ ನಷ್ಟ ತಃಖ್ತೆ

| ಕ್ರ.ಸಂ. | ವೆಚ್ಚಗಳ ವಿವರ | ಮೊಬಲಗು |
|---|---|---|
| 01) | ಬಡ್ಡಿ ಪಾವತಿಸಿದ್ದು | 44,44,784-00 |
| 02) | ಸಿಬ್ಬಂದಿ ವೇತನ | 7,06,642-00 |
| 03) | ಆಡಳಿತ ವೆಚ್ಚಗಳು | 23,71,489-00 |
| 04) | ಅವಕಾಶಗಳು | 1,28,741-00 |
| 05) | ನಿವ್ವಳ ಲಾಭ | 23,54,087-40 |
| | ಒಟ್ಟು | 1,00,05,743-40 |

| ಕ್ರ.ಸಂ. | ಆದಾಯದ ವಿವರ | ಮೊಬಲಗು |
|---|---|---|
| 01) | ಬಡ್ಡಿಯಿಂದ ಬಂದ ಆದಾಯ | 88,99,858-00 |
| 02) | ಇತರೆ ಆದಾಯ | 11,05,885-40 |
| | ಒಟ್ಟು | 1,00,05,743-40 |

### ಲೆಕ್ಕ ಪರಿಶೋಧನಾ ದೃಢೀಕರಣ ಪತ್ರ

ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ, ದಾವಣಗೆರೆ, ಇದರ 2022-23ನೇ ಸಾಲಿನ ಲೆಕ್ಕಪತ್ರಗಳನ್ನು ನಾನು ಪರಿಶೀಲಿಸಿರುತ್ತೇನೆ. ಲೆಕ್ಕ ಪರಿಶೋಧನೆಗೆ ಅಗತ್ಯವೆನಿಸಿದ ಮಾಹಿತಿ, ವಿವರಣೆಗಳನ್ನು ಸಂಬಂಧಪಟ್ಟವರಿಂದ ಪಡೆದಿರುತ್ತೇನೆ. ಅವುಗಳು ನನ್ನ ಅತ್ಯುತ್ತಮ ಜ್ಞಾನ ಹಾಗೂ ನಂಬಿಕೆಯಂತೆ ತೃಪ್ತಿಕರವಾಗಿರುತ್ತವೆ. ಲೆಕ್ಕ ಪರಿಶೋಧನಾ ವೇಳೆಯಲ್ಲಿ ನನಗೆ ದೊರೆತ ಮಾಹಿತಿ ವಿವರಣೆಗಳಂತೆ ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿ **ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಸಹಕಾರಿ ಸಂಘ**ದ ಲೆಕ್ಕ ಪತ್ರಗಳ ಬಗ್ಗೆ ತಿಳಿಸಲಾದ ಅಂಶಗಳು, ನ್ಯೂನ್ಯತೆಗಳು ಹಾಗೂ ಷರಾಗಳಿಗೊಳಪಟ್ಟು 2022-23ನೇ ಸಾಲಿನ ಲಾಭ-ನಷ್ಟದ ತಃಖ್ತೆ ಹಾಗೂ 31.03.2023ರ ಅಂತ್ಯಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತಃಖ್ತೆಯು ಸಹಕಾರಿಯ ನಿಜವಾದ ಆರ್ಥಿಕ ಸ್ಥಿತಿಯ ನೈಜ ಚಿತ್ರಣವನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

ಸಹಿ/- ಬಿ. ಸುರೇಶ್, ಅಧ್ಯಕ್ಷರು
ಸಹಿ/- ಜೆ.ಕೆ. ಶಿವಕುಮಾರ್, ಉಪಾಧ್ಯಕ್ಷರು
ಸಹಿ/- ಎಸ್.ವಿ. ರುದ್ರಮುನಿ, ನಿರ್ದೇಶಕರು
ಸಹಿ/- ಎನ್. ರಾಜಣ್ಣ, ನಿರ್ದೇಶಕರು
ಸಹಿ/- ಆರ್. ವೆಂಕಟಾಚಲ ಮೂರ್ತಿ, ಮುಖ್ಯ ಕಾರ್ಯನಿರ್ವಾಹಕರು

ಸಿಎ ಹರ್ಷ ಡಿ.ಇ. ಸನ್ನದು ಲೆಕ್ಕಿಗರು
ಎಫ್‌ಆರ್‌ಸಂ. 1057935 ಸಸಂ. 236274, UDIN 23236274BGPLBA7881

ಸೌಹಾರ್ದ ಕಾಯ್ದೆ ಹಾಗೂ ಸಹಕಾರಿ ಉಪವಿಧಿನಿಯಮಾನುಸಾರ ಸದಸ್ಯರು ಸಹಕಾರಿಗೆ ಯಾವುದೇ ರೀತಿಯ ಸುಸ್ತಿದಾರರಾಗಿದ್ದಲ್ಲಿ, ನಿರಂತರ ಸಾಮಾನ್ಯ ಸಭೆಗೆ ಅನುಮತಿ ಇಲ್ಲದೇ ಗೈರು ಹಾಜರಾಗಿದ್ದಲ್ಲಿ ಅಥವಾ ಸಹಕಾರಿ ಕನಿಷ್ಠ ಸೇವೆಗಳನ್ನು ಬಳಸಿಕೊಳ್ಳದಿದ್ದು ಅನರ್ಹತೆಗೆ ಗುರಿಯಾಗುತ್ತಾರೆ. ಆದ ಕಾರಣ ಸದಸ್ಯರುಗಳು ತಮ್ಮ ಉಳಿತಾಯಗಳನ್ನು ಸಹಕಾರಿಯಲ್ಲಿಯೇ ತೊಡಗಿಸಿ, ವ್ಯವಹಾರಗಳನ್ನು ಮಾಡಿ, ಸಹಕಾರಿ ಇನ್ನೂ ಸದೃಢವಾಗಿ ಬೆಳೆಯಲು ಸಹಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

# 4ನೇ ದಿನಕ್ಕೆ ಕಾಲಿಟ್ಟ ರೈತರ ಪ್ರತಿಭಟನೆ



## ಮಲೇಬೆನ್ನೂರು

ಮಲೇಬೆನ್ನೂರು, ಸೆ.22- ಭದ್ರಾ ಬಲದಂಡೆ ನಾಲೆಯಲ್ಲಿ ಸತತವಾಗಿ ನೀರು ಹರಿಸುವಂತೆ ಒತ್ತಾಯಿಸಿ, ಮಲೇಬೆನ್ನೂರಿನ ನೀರಾವರಿ ಇಲಾಖೆಯ ಕಚೇರಿ ಎದುರು ಹರಿಹರ ತಾಲ್ಲೂಕಿನ ರೈತರು ನಡೆಸುತ್ತಿರುವ ಪ್ರತಿಭಟನೆ ಶುಕ್ರವಾರ 4ನೇ ದಿನಕ್ಕೆ ಕಾಲಿಟ್ಟಿತು.

ಪ್ರತಿಭಟನೆ ವೇಳೆ ಮಾತನಾಡಿದ ರೈತ ಮುಖಂಡ ಮುದೇಗೌಡ್ರ ತಿಪ್ಪೇಶ್ ಅವರು, ಮಲೇಬೆನ್ನೂರು ಬಂದ್‌ಗೆ ನೀಡಿದ್ದ ಕರೆಯನ್ನು ಪೊಲೀಸ್ ಅಧಿಕಾರಿಗಳ ಮನವಿ ಮೇರೆಗೆ ಸದ್ಯ ಕೈಬಿಟ್ಟಿದ್ದೇವೆ.

ಭಾನುವಾರದೊಳಗೆ ಭದ್ರಾ ನಾಲೆಗೆ ನೀರು ಹರಿಸದಿದ್ದರೆ, ನಮ್ಮ ಹೋರಾಟ ತೀವ್ರಗೊಳ್ಳಲಿದೆ. ಸರ್ಕಾರ ಇದಕ್ಕೆ ಅವಕಾಶ ನೀಡದೇ ನಾಲೆಗೆ ಹರಿಸಿ, ರೈತರನ್ನು ಸಂರಕ್ಷಿಸಬೇಕು. ಭತ್ತದ ನಾಟಿ ಒಮ್ಮೆ ಒಣಗಿದ ನಂತರ ಎಷ್ಟೇ ನೀರು ಬಿಟ್ಟರೂ ಉಪಯೋಗವಿಲ್ಲ. ಹಾಗಾಗಿ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಜಿಲ್ಲೆಯ ಶಾಸಕರು ಕೂಡಲೇ ನಾಲೆಗೆ ನೀರು ಹರಿಸುವಂತೆ ನೀರಾವರಿ ಸಚಿವರನ್ನು ಖುದ್ದು ಭೇಟಿ ಮಾಡಿ, ಒತ್ತಡ ಹೇರಬೇಕೆಂದು ಮುದೇಗೌಡ್ರ ತಿಪ್ಪೇಶ್ ಮನವಿ ಮಾಡಿದರು.

ಯಲವಟ್ಟಿಯ ಡಿ.ಹೆಚ್.ಚನ್ನಬಸಪ್ಪ ಮಾತನಾಡಿ, ಭದ್ರಾ ಕಾಡಾ ಸಮಿತಿ ಮೇಲ್ಭಾಗದ ರೈತರ ಹಿತವನ್ನು ಅಷ್ಟೇ ಕಾಪಾಡುತ್ತಿದೆ ಎಂದು ಆರೋಪಿಸಿದರು.

ಈ ವೇಳೆ ಪ್ರಭಾರ ಇಇ ಮಂಜುನಾಥ್, ಎಇಇ ಧನುಂಜಯ ಅವರಿಗೆ ರೈತರು ಕೂಡಲೇ ಭದ್ರಾ ಬಲದಂಡೆ ನಾಲೆಗೆ ನೀರು ಹರಿಸುವಂತೆ ಮನವಿ ಪತ್ರ ನೀಡಿದರು. ಯಲವಟ್ಟಿ ಮಹೇಂದ್ರಪ್ಪ, ಮದಕರಿ, ವಿನಾಯಕ ನಗರ ಕ್ಯಾಂಪಿನ ಶ್ರೀನಿವಾಸ್, ಬಸಾಪುರದ ವೀರಭದ್ರಯ್ಯ, ಓ.ಜಿ. ಕುಮಾರ್, ಆದಾಪುರದ ತಿಮ್ಮಯ್ಯ ಸೇರಿದಂತೆ ಕುಂಬಳೂರು, ನಿಟ್ಟೂರು, ನಂದಿತಾವರೆ, ಜಿಗಳಿ, ಭಾನುವಳ್ಳಿ, ಸಿರಿಗೆರೆ, ಕೆ.ಎನ್.ಹಳ್ಳಿ, ಕೊಕ್ಕನೂರು, ಜಿ.ಬೇವಿನಹಳ್ಳಿ ಮತ್ತು ಮಲೇಬೆನ್ನೂರಿನ ನೂರಾರು ರೈತರು ಪ್ರತಿಭಟನೆಯಲ್ಲಿದ್ದರು.

ಪಿಎಸ್ಐ ಪ್ರಭು ಕೆಳಗಿನಮನೆ ನೇತೃತ್ವದಲ್ಲಿ ಪೊಲೀಸರು ಭದ್ರತೆ ಒದಗಿಸಿದ್ದರು.

# ಹರಿಹರ ತಾ.ಪ್ರಾ.ಸಹಕಾರಿ ಬ್ಯಾಂಕ್‌ಗೆ 43.99 ಲಕ್ಷ ಲಾಭ



ಹರಿಹರ, ಸೆ.21 - ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ 2022-23ನೇ ಸಾಲಿನಲ್ಲಿ ಶೇ.43.99 ಲಕ್ಷಗಳಷ್ಟು ಲಾಭ ಹೊಂದಿದೆ. ಹಿಂದಿನ ಸಾಲಿನ ನಷ್ಟ 13.20 ಹೋಗಲಾಡಿಸಿ, 30.78 ನಿವ್ವಳ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷ ಹೆಚ್. ಟಿ.ಹಳ್ಳಿಹಾಳು ಧರ್ಮರಾಜ್ ಹೇಳಿದರು.

ನಗರದ ಕಾಟ್ವೆ ಭವನದಲ್ಲಿ ಗುರುವಾರ ಏರ್ಪಡಿಸಿದ್ದ ಬ್ಯಾಂಕ್‌ನ 2022-23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು ಮಾತನಾಡಿದರು.

ಸಾಲಗಾರರು ತಾವು ಪಡೆದ ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡಿ, ಇತರೆ ಸದಸ್ಯರಿಗೂ ಸಹ ಸಾಲ ಸೌಲಭ್ಯ ದೊರಕುವಂತೆ ಮಾಡಬೇಕು ಎಂದವರು ಮನವಿ ಮಾಡಿಕೊಂಡರು.

ಬ್ಯಾಂಕ್‌ನ ನಿರ್ದೇಶಕರಾದ ಎ.ಸಿದ್ದವೀರಪ್ಪ ಬೆಳ್ಳೂಡಿ, ಗುತ್ತೂರು ಚಂದ್ರಪ್ಪ, ಯಲವಟ್ಟಿ ಗೌಡ್ರ ಆಂಜನೇಯ, ಕೊಂಡಜ್ಜಿ ಸುಧಾ ಕೆ. ಎನ್., ಆಡಳಿತ ಮಂಡಳಿಯ ಪ್ರಭಾರಿ ವ್ಯವಸ್ಥಾಪಕಿ ಎಸ್.ಸ್ಮಿತಾ ಪಾಟೇಲ್ ಕಾರ್ಯಕ್ರಮ ಕುರಿತು ಮಾತನಾಡಿದರು.

ಸಿರಿಗೆರೆ ರಾಜಣ್ಣ, ಪ್ರಸನ್ನ ಬಣಕಾರ, ಕೆ. ರವಿಂದ್ರನಾಥ್, ಕೆ.ಎಂ ಬಸವರಾಜಪ್ಪ, ಹೆಚ್.ಕೆ ನಾಗರಾಜ್, ಅಂಜಿನಮ್ಮ ಆರ್.ಬಿ ವಿಜಯಲಕ್ಷ್ಮೀ ಮತ್ತಿತರರು ಉಪಸ್ಥಿತರಿದ್ದರು.

# ಭದ್ರಾ ನೀರಿಗೆ ಮುಂದುವರೆದ ಹೋರಾಟ

## ಟ್ರ್ಯಾಕ್ಟರ್ ರ್‍ಯಾಲಿಗೆ ಮುಂದಾದ ರೈತರಿಗೆ ಪೊಲೀಸರ ತಡೆ



ದಾವಣಗೆರೆ, ಸೆ. 22 - ಭದ್ರಾ ಜಲಾಶಯದಿಂದ ಬಲದಂಡೆಗೆ ಸತತ 100 ದಿನ ನೀರು ಹರಿಸಲು ಆಗ್ರಹಿಸಿ ಟ್ರ್ಯಾಕ್ಟರ್ ರ್‍ಯಾಲಿ ನಡೆಸಲು ಮುಂದಾದ ರೈತರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ನಗರದ ಬೀರಲಿಂಗೇಶ್ವರ ದೇವಾಲಯದ ಆವರಣದಿಂದ ಟ್ರ್ಯಾಕ್ಟರ್ ರ್‍ಯಾಲಿ ನಡೆಸಲು ಭಾರತೀಯ ರೈತ ಒಕ್ಕೂಟದ ಮುಖಂಡರು ನಿರ್ಧರಿಸಿದ್ದರು.

ಈ ಹಿಂದೆ ಸತತ 100 ದಿನ ನೀರು ಹರಿಸುವುದಾಗಿ ತಿಳಿಸಿದ್ದ ಕಾರಣ ಬಿತ್ತನೆ ಮಾಡಿದ್ದೇವೆ. ಈಗ ಆನ್ ಅಂಡ್ ಆಫ್ ಪದ್ಧತಿಯಲ್ಲಿ ನೀರು ಬಿಡುವುದಾಗಿ ತಿಳಿಸಲಾಗಿದೆ. ಇದರಿಂದಾಗಿ ಭತ್ತದ ಬೆಳೆ ಹಾಳಾಗುವ ಆತಂಕವಿದೆ ಎಂದು ರೈತ ಮುಖಂಡರು ತಿಳಿಸಿದರು.

ನಾಲ್ಕು ದಿನಗಳಿಂದ ಹೋರಾಟ ನಡೆಸುತ್ತಿದ್ದರೂ ಸರ್ಕಾರ ಇದುವರೆಗೂ ಭದ್ರಾ ಅಚ್ಚುಕಟ್ಟಿನ ನೀರಾವರಿ ಸಲಹಾ ಸಮಿತಿ ಸಭೆ ನಡೆಸಲು ಮುಂದಾಗಿಲ್ಲ. ರೈತರನ್ನು ಸರ್ಕಾರ ನಿರ್ಲಕ್ಷಿಸುವುದರ ವಿರುದ್ಧ ಟ್ರ್ಯಾಕ್ಟರ್ ರ್‍ಯಾಲಿ ನಡೆಸುವುದಾಗಿ ರೈತ ಮುಖಂಡರು ಹೇಳಿದರು.

ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ರೈತರು ಟ್ರ್ಯಾಕ್ಟರ್ ರ್‍ಯಾಲಿಗೆ ಮುಂದಾದರು. ಆದರೆ, ಬೀರಲಿಂಗೇಶ್ವರ ದೇವಾಲಯದ ಗೇಟ್ ಮುಚ್ಚಿದ ಪೊಲೀಸರು, ರೈತರು ಹೊರ ಹೋಗದಂತೆ ತಡೆದರು.

ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ರೈತರು, ಎರಡು ದಿನಗಳ ಹಿಂದೆಯೇ ಪ್ರತಿಭಟನೆ ಮಾಡುವುದಾಗಿ ತಿಳಿಸಲಾಗಿತ್ತು. ಶಾಂತಿಯುತ ಪ್ರತಿಭಟನೆಗೆ ಅಡ್ಡಿಪಡಿಸಲಾಗುತ್ತಿದೆ ಎಂದು ಆಕ್ಷೇಪಿಸಿದರು.

ಆಗ ಪೊಲೀಸರು ಹಾಗೂ ರೈತರ ನಡುವೆ ವಾಗ್ವಾದ ನಡೆಯಿತು. ನಂತರ ಪ್ರತಿಭಟನಾ ನಿರತ ರೈತರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ನಿನ್ನೆ ರೈತರು ಹೆದ್ದಾರಿ ತಡೆ ನಡೆಸಿದ್ದರು. ಟ್ರ್ಯಾಕ್ಟರ್ ರ್‍ಯಾಲಿ ಮೂಲಕ ಮತ್ತೆ ಹೆದ್ದಾರಿ ತಡೆ ನಡೆಸುವ ಮಾಹಿತಿ ಇತ್ತು. ಹೆದ್ದಾರಿ ತಡೆದರೆ ದೊಡ್ಡ ಸಮಸ್ಯೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ರೈತರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಹೆಚ್. ಆರ್. ಶಾಮನೂರು ಲಿಂಗರಾಜ್, ಕೋಳೇನಹಳ್ಳಿ ಸತೀಶ್, ಬೆಳವನೂರು ನಾಗೇಶ್ವರ ರಾವ್, ಲೋಕಿಕೆರೆ ನಾಗರಾಜ್, ಡಾ. ರವಿಕುಮಾರ್, ಗುರುನಾಥ್, ಕುಂದುವಾಡ ಗಣೇಶಪ್ಪ, ಕುಂದುವಾಡ ಹನುಮಂತಪ್ಪ, ಮಹೇಶ್ವರಪ್ಪ ಹೊಸ ಕುಂದುವಾಡ, ಅಗಸನಕಟ್ಟೆ ಅಣ್ಣಪ್ಪ, ಪುನೀತ್ ಮತ್ತಿತರರು ಪಾಲ್ಗೊಂಡಿದ್ದರು.

### ರೈತರನ್ನು ಗಮನಿಸದ ಸರ್ಕಾರ ಮುಖಂಡರಿಂದ ತೀವ್ರ ಆಕ್ರೋಶ

ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ರೈತರು ಪ್ರತಿಭಟನೆ ನಡೆಸುತ್ತಿದ್ದರೂ ಸಹ ಸರ್ಕಾರ ಗಮನ ಹರಿಸುತ್ತಿಲ್ಲ ಎಂದು ರೈತ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆದ್ದಲು ಪ್ರದೇಶದ ಬೆಳೆ ಈಗಾಗಲೇ ಹಾಳಾಗಿದೆ. ಭತ್ತಕ್ಕೂ ನೀರು ಕೊಡದೇ ಇದ್ದರೆ ಮುಂದಿನ ದಿನಗಳಲ್ಲಿ ರೈತರು ಸಂಕಷ್ಟಕ್ಕೆ ಸಿಲುಕುವ ಜೊತೆಗೆ, ಮೇವಿಲ್ಲದೇ ಜಾನುವಾರುಗಳೂ ಸಮಸ್ಯೆಗೆ ಸಿಲುಕಲಿವೆ ಎಂದು ತ.

ಕಾವೇರಿ ವಿಷಯ ದೊಡ್ಡದು ಎಂಬಂತೆ ಬಿಂಬಿಸುತ್ತಿರುವ ಸರ್ಕಾರ, ಕೇವಲ ಮಂಡ್ಯಕ್ಕೆ ಸೀಮಿತವಾಗಿರುವಂತಿದೆ. ಆದರೆ, ಕೆ.ಆರ್. ಎಸ್.ಗಿಂತ ಭದ್ರಾ ಅಣೆಕಟ್ಟೆ ಹೆಚ್ಚಿನ ಜಲ ಸಂಗ್ರಹ ಹೊಂದಿದೆ. ಆದರೂ, ಈ ಭಾಗದ ರೈತರ ಸಮಸ್ಯೆ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಹೆಚ್. ಆರ್. ಶಾಮನೂರು ಲಿಂಗರಾಜ್ ಟೀಕಿಸಿದರು.

ಮುಖಂಡರಾದ ಡಾ. ರವಿಕುಮಾರ್ ಮಾತನಾಡಿ, ಭದ್ರಾ ನೀರು ಮಧ್ಯ ಕರ್ನಾಟಕಕ್ಕೆ ಜೀವಜಲ. ಈ ಹೋರಾಟದಲ್ಲಿ ರೈತರಷ್ಟೇ ಅಲ್ಲದೇ ಎಲ್ಲ ವರ್ಗದ ನಾಗರಿಕರು ಭಾಗವಹಿಸಬೇಕು. 22 ಟಿ.ಎಂ.ಸಿ.ಗೂ ಹೆಚ್ಚು ನೀರು ಕೃಷಿಗೆ ಇದೆ. ಆದರೂ 15 ಟಿಎಂಸಿ ನೀರು ಒದಗಿಸಲು ಸರ್ಕಾರ ಸಿದ್ಧವಿಲ್ಲ ಎಂದು ಹೇಳಿದರು.

ಬಿಜೆಪಿ ಮುಖಂಡ ಲೋಕಿಕೆರೆ ನಾಗರಾಜ್ ಮಾತನಾಡಿ, ಸತತ 100 ದಿನ ನೀರು ಹರಿಸುವುದಾಗಿ ಸರ್ಕಾರ ತಿಳಿಸಿದ ಹಿನ್ನೆಲೆಯಲ್ಲಿ ರೈತರು ಸಾಲ ಸೋಲ ಮಾಡಿ ಬಿತ್ತನೆ ಮಾಡಿದ್ದಾರೆ. ಆದರೆ, ಈಗ ಆನ್ ಅಂಡ್ ಆಫ್ ಪದ್ಧತಿ ಎಂದು ಹೇಳುತ್ತಿರುವುದರಿಂದ ರೈತರು ತಲೆ ಮೇಲೆ ಕೈ ಹೊತ್ತು ಕುಳಿತಿದ್ದಾರೆ ಎಂದರು.

# ಎಸ್ಸೆಸ್ಸೆಂ ಜನ್ಮದಿನ : ಹರಿಹರದಲ್ಲಿ ರಕ್ತದಾನ ಶಿಬಿರ



ಹರಿಹರ, ಸೆ. 22 - ಹರಿಹರ ನನಗೆ ತವರು ಮನೆಯಂತೆ. ನಾನು ಬಾಲ್ಯದ ದಿನಗಳನ್ನು ಹರಿಹರದಲ್ಲಿ ಕಳೆದಿದ್ದೇನೆ ಎಂದು ಎಸ್.ಎಸ್. ಕೇರ್ ಟ್ರಸ್ಟ್ ಅಧ್ಯಕ್ಷರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ 56 ನೇ ಜನ್ಮದಿನದ ಪ್ರಯುಕ್ತ ನಗರದ ಶ್ರೇಯ ಆಸ್ಪತ್ರೆ ಆವರಣದಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿ ಆಯೋಜಿಸಿದ ರಕ್ತ ದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿ ವ್ಯಕ್ತಿ ಕನಿಷ್ಟ ವರ್ಷಕ್ಕೊಮ್ಮೆಯಾದರೂ ರಕ್ತದಾನ ಮಾಡಬೇಕು. ಇದು ಆರೋಗ್ಯಕ್ಕೆ ಒಳ್ಳೆಯದು ಹಾಗೂ ಇನ್ನೊಬ್ಬರ ಜೀವ ಉಳಿಸಲೂ ಸಹಾಯವಾಗುತ್ತದೆ ಎಂದು ಅವರು ಹೇಳಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ನೇತೃತ್ವದಲ್ಲಿ ಕಳೆದ ವರ್ಷ ನಡೆದ ಶಿಬಿರದಲ್ಲಿ ಹೆಚ್ಚು ಜನ ರಕ್ತ ದಾನ ಮಾಡಿ ತಾಲ್ಲೂಕಿನಲ್ಲಿ ದಾಖಲೆ ನಿರ್ಮಿಸಿದ್ದರು. ಈ ಬಾರಿಯು ಅವರ ನೇತೃತ್ವದಲ್ಲಿ ಹರಿಹರ ಕ್ಷೇತ್ರದಲ್ಲಿ ಹೆಚ್ಚಿನ ಕಾರ್ಯ ನಡೆಯಲಿ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಹರಳಹಳ್ಳಿ ಬಸಪ್ಪ, ನಂದಿಗಾವಿ ಶ್ರೀನಿವಾಸ್, ಬ್ಲಾಕ್ ಅಧ್ಯಕ್ಷರಾದ ಎಲ್.ಬಿ. ಹನುಮಂತಪ್ಪ, ಎಂ.ಬಿ.ಅಬಿದ್ ಅಲಿ, ಮುಖಂಡರಾದ ಟಿ.ಮುರಗೇಶಪ್ಪ, ಹನುಮಂತಪ್ಪ ರೆಡ್ಡಿ, ಸೈಯದ್ ಸನಾವುಲ್ಲಾ ನಗರಸಭೆ ಸದಸ್ಯರಾದ ಶಂಕರ್ ಖಟಾವಕರ್, ಬಾಬುಲಾಲ್ ಸಾಬಿರ್ ಅಲಿ, ಅರಿಫ್ ಅಲಿ, ಕೆ.ಪಿ. ಗಂಗಾಧರ, ಭೋವಿ ಕುಮಾರ್, ಸೈಯದ್ ಜಾಕೀರ್, ಬಿ.ಬಿ. ಮಲ್ಲೇಶ್ ಕಮಲಾಪುರ್, ಮಲ್ಲಿನಾಥ, ಶಿವಕುಮಾರ್ ಒಡೆಯರ್, ಭಾಗ್ಯದೇವಿ, ನಾಗಮ್ಮ, ಜಮಿಲಾ ಮತ್ತಿತರರು ಉಪಸ್ಥಿತರಿದ್ದರು.

# ದಸರಾ ನಂತರ ಜೆಡಿಎಸ್ - ಬಿಜೆಪಿ ಸೀಟು ಹಂಚಿಕೆ

**(1ನೇ ಪುಟದಿಂದ)** ನಂತರ ಸೀಟು ಹಂಚಿಕೆ ಘೋಷಣೆಯಾಗಲಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತನಗೆ 6 – 8 ಸೀಟುಗಳನ್ನು ನೀಡಬೇಕು ಎಂದು ಜೆಡಿಎಸ್ ಕೇಳುತ್ತಿದೆ. ಆದರೆ, ಮೂರರಿಂದ ನಾಲ್ಕು ಸೀಟುಗಳನ್ನು ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

# ಹರಪನಹಳ್ಳಿಯಲ್ಲಿ ನಾಳೆ ನೂರು ಕೃತಿಗಳ ಲೋಕಾರ್ಪಣೆ , ರಾಜ್ಯ ಮಟ್ಟದ ಕವಿಗೋಷ್ಠಿ



ಹರಪನಹಳ್ಳಿ, ಸೆ. 22 - ಕರ್ನಾಟಕ ರಾಜ್ಯ ಬರಹಗಾರರ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕ ಮತ್ತು ಕರ್ನಾಟಕ ರಾಜ್ಯ ಬರಹಗಾರರ ಸಂಘದ ತಾಲ್ಲೂಕು ಘಟಕದ ಸಂಯುಕ್ತ ಅಶ್ರಯದಲ್ಲಿ ಪಟ್ಟಣದ ತೆಗ್ಗಿನ ಮಠದ ಚಂದ್ರಶೇಖರ ಸ್ವಾಮಿ ಸಭಾ ಭವನದಲ್ಲಿ ನಾಡಿದ್ದು ದಿನಾಂಕ 24 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನೂರು ಕೃತಿಗಳ ಲೋಕಾರ್ಪಣೆ ಹಾಗೂ ರಾಜ್ಯ ಮಟ್ಟದ ಕವಿಗೋಷ್ಠಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬರಹಗಾರರ ಸಂಘದ ರಾಜ್ಯಾಧ್ಯಾಕ್ಷ ಮಧುನಾಯ್ಕ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ತೆಗ್ಗಿನ ಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ ಜೋಶಿ ಅವರು ಕೃತಿಗಳನ್ನು ಲೋಕಾರ್ಪಣೆ ಮಾಡಲಿದ್ದಾರೆ. ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಸುಮಾರು 125 ಜನ ಬರಹಗಾರರು, 140 ಕೃತಿಗಳೊಂದಿಗೆ ಹಾಜರಾಗಲಿದ್ದು, ರಾಜ್ಯ ಮಟ್ಟದ ಕವಿಗೋಷ್ಠಿಗೆ 40 ಜನ ಕವಿಗಳು, ಚಲನ ಚಿತ್ರನಟ ಮೈಸೂರು ರಮಾನಂದ ಸೇರಿದಂತೆ, ಇತರರು ಹಾಜರಾಗಲಿದ್ದಾರೆ ಎಂದು ತಿಳಿಸಿದರು.

ರಾಜ್ಯ ಬರಹಗಾರರ ಸಂಘದ ಪ್ರಧಾನ ಕಾರ್ಯದರ್ಶಿ ವಿ.ಜಿ. ಅಗ್ರಹಾರ, ರಾಜ್ಯ ಬರಹಗಾರರ ಸಂಘ ತಾಲ್ಲೂಕು ಘಟಕದ ಅಧ್ಯಕ್ಷ ಕೆ.ಬಸವರಾಜ, ಕಾರ್ಯದರ್ಶಿ ಮಂಜುನಾಥ ಎಚ್.ಕೆ. ಸದಸ್ಯರಾದ ಕೊಟ್ರೇಶ. ಕೆ. ಶಾಂತಲಿಂಗಪ್ಪ ಟಿ, ಗಾಟಿನ ಮಂಜುನಾಥ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



## ಹರಿಹರ : ಕೈಲಾಸ ನಗರದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ

ಹರಿಹರ, ಸೆ. 22 - ನಗರದ ಕೈಲಾಸನಗರ ಬಡಾವಣೆಯ ಶ್ರೀ ವಿನಾಯಕ ಯುವಕ ಸಂಘದ ವತಿಯಿಂದ 11 ಅಡಿ ಎತ್ತರದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸಿದರು.

## ನಗರದಲ್ಲಿ ಇಂದು ಮಹಾ ಮೃತ್ಯುಂಜಯ ಹೋಮ

ವಾಸವಿ ಯುವಜನ ಸಂಘದ ವತಿಯಿಂದ ನಡೆಯುತ್ತಿರುವ 42 ನೇ ವರ್ಷದ ಶ್ರೀ ವಿನಾಯಕ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10ರಿಂದ ಶ್ರೀ ನಗರೇಶ್ವರ ಸ್ವಾಮಿಗೆ ಏಕಾದಶ ರುದ್ರಾಭಿಷೇಕ ನಂತರ ಮಹಾ ಮೃತ್ಯುಂಜಯ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥ-ಪ್ರಸಾದ ವಿನಿಯೋಗವಿದೆ.

# ತರಳಬಾಳು ಶ್ರೀ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಧಾನ್ಯ ಸಮರ್ಪಣೆ



ದಾವಣಗೆರೆ, ಸೆ. 22-ತರಳಬಾಳು ಜಗದ್ಗುರು ಲಿಂ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ 31 ನೇ ಶ್ರದ್ಧಾಂಜಲಿ ಕಾರ್ಯಕ್ರಮದ ದಾಸೋಹಕ್ಕೆ ತಾಲ್ಲೂಕಿನ (ಪಾಲಿಕೆ ವ್ಯಾಪ್ತಿಯ 21 ನೇ ವಾರ್ಡ್) ಬಸಾಪುರ ಗ್ರಾಮದ ಭಕ್ತರಿಂದ ಗೋಧಿ ನುಚ್ಚು, ಹೆಸರುಬೇಳೆ, ಕಡ್ಲೆಕಾಳು ಸಮರ್ಪಿಸಲಾಯಿತು.

ಈ ಸಂದರ್ಭದಲ್ಲಿ ತರಳಬಾಳು ಶಾಲಾ ಸ್ಥಳೀಯ ಸಲಹಾ ಸಮಿತಿಯ ಕಾರ್ಯದರ್ಶಿ ಎಸ್. ಸುರೇಂದ್ರಪ್ಪ, ಉಪಾಧ್ಯಕ್ಷರಾದ ಬಿ.ಟಿ. ಮರುಳಸಿದ್ಧಪ್ಪ, ತರಳಬಾಳು ಗ್ರಾಮ ಸಮಿತಿಯ ಅಧ್ಯಕ್ಷ ಟಿ. ರೇವಣಸಿದ್ದಪ್ಪ, ಕಾರ್ಯದರ್ಶಿ ಪ್ರದೀಪ್ ಕುಮಾರ್, ಬಾತಿ ವಿಶ್ವನಾಥ್, ಸಿ. ವಿಜಯಕುಮಾರ್, ಬೇತೂರು ಜಗದೀಶ್, ಬಣಕಾರ ಬಸವರಾಜ್, ಬಿ.ಎಸ್. ಶಿವಮೂರ್ತಿ, ಐಗೂರು ರಾಜು, ಬಿ.ಎಸ್. ಸಿದ್ದೇಶ್, ಟಿ.ಎಂ. ಯೋಗೇಶ್, ಬಿ. ಶಿವಮೂರ್ತಿ, ಕೆ.ಬಿ. ವೀರೇಶ್, ಕೆ.ಪಿ. ಸುನೀಲ್ ಕುಮಾರ್, ಕೆ.ಬಿ. ಕರಿಬಸಪ್ಪ ಮತ್ತಿತರರು ಉಪಸ್ಥಿತರಿದ್ದರು.

## ತರಳಬಾಳು : ಶ್ರದ್ಧಾಂಜಲಿಗೆ ಭಕ್ತರಿಂದ 50 ಟಿನ್ ಅಡುಗೆ ಎಣ್ಣೆ, 20 ಬಾಕ್ಸ್ ಟೊಮ್ಯಾಟೋ




ದಾವಣಗೆರೆ, ಸೆ. 22 - ಶ್ರೀ ತರಳಬಾಳು ಗುರುಗಳ ಶ್ರದ್ಧಾಂಜಲಿ ಕಾರ್ಯಕ್ರಮದ ಅಂಗವಾಗಿ ಮೆಳ್ಳೇಕಟ್ಟೆ ಗ್ರಾಮದ ಭಕ್ತರಿಂದ 50 ಟಿನ್ ಅಡಿಗೆ ಎಣ್ಣೆ, 20 ಬಾಕ್ಸ್ ಟೊಮ್ಯಾಟೋವನ್ನು ದಾಸೋಹಕ್ಕೆ ನೀಡಿದರು.

## ಸೆ.25ರ ವೇಳೆಗೆ ಮುಂಗಾರಿಗೆ ತೆರೆ

**(1ನೇ ಪುಟದಿಂದ)** ಸರಿಯುತ್ತದೆ. ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಇದುವರೆಗೂ 780.3 ಮಿ.ಮೀ. ಮಳೆಯಾಗಿದೆ. ವಾಡಿಕೆ ಮಳೆಯ ಪ್ರಮಾಣ 832.4 ಮಿ.ಮೀ. ಆಗಿದೆ.


**ಶ್ರೀ ಮಾಚಿದೇವ ಕ್ರೆಡಿಟ್ ಕೋ-ಆಪ್. ಸೊಸೈಟಿ ನಿ.,**

ನಂ. 10, ಪಿ. ಹಾಲೇಶಪ್ಪ ಕಾಂಪ್ಲೆಕ್ಸ್, ಹಳೇ ಅಂಡರ್ ಬ್ರಿಡ್ಜ್ ಹತ್ತಿರ,
ವಸಂತ ರಸ್ತೆ, ದಾವಣಗೆರೆ. ಫೋ: 252055



**ಸರ್ವ ಸದಸ್ಯರ 24ನೇ ವಾರ್ಷಿಕ ಮಹಾಸಭೆ**

2022-23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು **ಶ್ರೀ ಎ. ರಾಮಚಂದ್ರಪ್ಪ** ಇವರ ಘನ ಅಧ್ಯಕ್ಷತೆಯಲ್ಲಿ **ದಿನಾಂಕ 23.09.2023ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ, ನಂ. 10, ಪಿ. ಹಾಲೇಶಪ್ಪ ಕಾಂಪ್ಲೆಕ್ಸ್, ಹಳೇ ಅಂಡರ್ ಬ್ರಿಡ್ಜ್ ಹತ್ತಿರ, ವಸಂತ ರಸ್ತೆ, ದಾವಣಗೆರೆಯಲ್ಲಿ** ಕರೆಯಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಮೇಲ್ಕಂಡ ಸಭೆಗೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ಸ್ಥಳ : ದಾವಣಗೆರೆ
ದಿನಾಂಕ : 21.09.2023

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

**WALK IN INTERVIEW**

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA FICO / SAP | 0-1 |
| 02 | Accounts (Senior) | 05 | Bcom / Mcom / MBA GST / INCOME TAX / SAP / FICO | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |

**HULLUMANE PROPERTIES & POWER PVT LTD.,**
# Depot Address - L 13, Lokikere Industrial Area, Opp. Davangere Wire Rope Industry, Lokikere Road, Davangere-577 005. Karnataka
**Drop Resume to Email - hrhullumanepropertiespwr@yahoo.com**

**ಸ್ಫೂರ್ತಿ ಇಂಟಿಗ್ರೇಟೆಡ್ ಸೊಲ್ಯೂಷನ್ಸ್ (I) ಪ್ರೈವೇಟ್ ಲಿಮಿಟೆಡ್‌ನಲ್ಲಿ ಉದ್ಯೋಗಾವಕಾಶ**

**ಅಡುಗೆಯವರು/ಹೌಸ್‌ಕೀಪರ್,** ಸಂಬಳ appx. ರೂ. 19461/-
(ತಿಂಗಳಿಗೆ ಎರಡು ದಿನ ರಜೆಗಳು, ರಾಷ್ಟ್ರೀಯ ಹಬ್ಬಗಳ ದಿನದಂದು ರಜೆಗಳು, ದಿನದ 8 ಗಂಟೆಗಳಿಗಿಂತ ಹೆಚ್ಚಿನ ಕಾಲ ಕಾರ್ಯನಿರ್ವಹಿಸಿದಲ್ಲಿ ಕಾರ್ಮಿಕ ಇಲಾಖೆ ನಿಗದಿಪಡಿಸಿದಂತೆ ಎರಡರಷ್ಟು ವೇತನ ದೊರೆಯುತ್ತದೆ.)
ಉದ್ಯೋಗ ಸ್ಥಳ: ಹಿರಿಯ ಸರ್ಕಾರಿ ಅಧಿಕಾರಿಗಳ ಮನೆ, ವಸಂತ ನಗರ, ಬೆಂಗಳೂರು
ದಯವಿಟ್ಟು ಸಂಪರ್ಕಿಸಿ: (M): 8296363332, 9513627627
spoorthygroup@yahoo.com, gm@spoorthygroup.in

**ಅಭಿನಂದನೆಗಳು**



ಲೋಕಿಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಲೋಕಿಕೆರೆ
ಇದರ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ
**ಶ್ರೀ ಕೆ.ಹೆಚ್. ಸುರೇಶ್**
ಇವರಿಗೆ ಹೃದಯಪೂರ್ವಕ ಅಭಿನಂದನೆಗಳು.
ಶುಭ ಕೋರುವವರು : **ಗ್ರಾಮಸ್ಥರು ಹಾಗೂ ಆಡಳಿತ ಮಂಡಳಿಯ ಸದಸ್ಯರು, ಲೋಕಿಕೆರೆ.**

# ಎಸ್ಸೆಸ್ಸೆಂ ಜನ್ಮ ದಿನ: 'ಬಾಪೂಜಿ ಹೆಲ್ತ್ ಕಾರ್ಡ್' ಬಿಡುಗಡೆ




ದಾವಣಗೆರೆ, ಸೆ. 22- ಬಾಪೂಜಿ ಸಮೂಹ ಆಸ್ಪತ್ರೆಗಳಲ್ಲಿ ಜನ ಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಆರೋಗ್ಯ ಸೇವೆಯನ್ನು ಕಲ್ಪಿಸುವ ಸದುದ್ದೇಶದಿಂದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಜನ್ಮದಿನದ ಅಂಗವಾಗಿ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಜನ್ಮದಿನದ ಪ್ರಯುಕ್ತ ಎಸ್ಸೆಸ್ಸೆಂ ಅವರ ಗೃಹ ಕಚೇರಿಯಲ್ಲಿ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ನಮ್ಮ ನಡೆ ಸದೃಢ ಆರೋಗ್ಯದ ಕಡೆ ಎಂಬ ಹೆಸರಿನ 'ಬಾಪೂಜಿ ಹೆಲ್ತ್ ಕಾರ್ಡ್' ಬಿಡುಗಡೆ ಮಾಡಲಾಯಿತು.

ಇದೇ ವೇಳೆ ಬಾಪೂಜಿ ಹೆಲ್ತ್ ಕಾರ್ಡ್ ಬಿಡುಗಡೆ ಮಾಡಿ ಮಾತನಾಡಿದ ಶಾಸಕ ಶಾಮನೂರು ಶಿವಶಂಕರಪ್ಪ ಅವರು, ಬಾಪೂಜಿ ಆಸ್ಪತ್ರೆ, ಎಸ್.ಎಸ್ ಹೈಟೆಕ್ ಆಸ್ಪತ್ರೆ, ಬಾಪೂಜಿ ಮಕ್ಕಳ ಆಸ್ಪತ್ರೆ, ಬಾಪೂಜಿ ಕಣ್ಣಿನ ಆಸ್ಪತ್ರೆ, ಎಸ್. ಎಸ್. ಸ್ಪರ್ಶ ಹಾಗೂ ಎಸ್.ಎಸ್.ನಾರಾಯಣ ಹೃದಯಾಲಯ ಆಸ್ಪತ್ರೆಯಲ್ಲಿ ಈ ಸೌಲಭ್ಯ ನೀಡಲಾಗುವುದು ಎಂದು ತಿಳಿಸಿದರು.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಎಲ್ಲಾ ಚಿಕಿತ್ಸೆಗಳಿಗೆ ರಿಯಾಯಿತಿ ನೀಡಬೇಕೆಂಬ ಆಶಯದಂತೆ ರಾಜ್ಯಾದ್ಯಂತ ಬಾಪೂಜಿ ಹೆಲ್ತ್ ಕಾರ್ಡ್ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಎಸ್.ಎಸ್.ಕೇರ್ ಟ್ರಸ್ಟ್‌ನ ಆಜೀವ ಟ್ರಸ್ಟಿ ಡಾ.ಪ್ರಭಾ ಮಲ್ಲಿಕಾರ್ಜುನ್, ಜಜಮು ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಶುಕ್ಲಾಶೆಟ್ಟಿ, ಎಸ್.ಎಸ್.ಐ.ಎಂ.ಎಸ್. ಕಾಲೇಜಿನ ಪ್ರಾಚಾರ್ಯ ಡಾ. ಬಿ.ಎಸ್. ಪ್ರಸಾದ್, ನಿರ್ದೇಶಕರಾದ ಡಾ. ಅರುಣಕುಮಾರ್ ಅಜ್ಜಪ್ಪ, ಬಾಪೂಜಿ ಮಕ್ಕಳ ಆಸ್ಪತ್ರೆ ಎಚ್.ಒ.ಡಿ. ಡಾ. ಮೂಗನಗೌಡ, ಬಾಪೂಜಿ ಆಸ್ಪತ್ರೆಯ ನಿರ್ದೇಶಕ ಡಾ.ಡಿ.ಕೆ.ಕುಮಾರ್, ಡಾ.ಧನ್ಯ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಸಚಿವ ಎಸ್ಸೆಸ್ಸೆಂರಿಂದ ನವೀಕೃತ ಈಜುಕೊಳ ಲೋಕಾರ್ಪಣೆ



ದಾವಣಗೆರೆ, ಸೆ. 22- ನಗರದ ಎಂ.ಸಿ.ಸಿ. ಬಿ ಬ್ಲಾಕ್‌ನಲ್ಲಿರುವ ನವೀಕರಣಗೊಂಡ ಈಜುಕೊಳವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಲೋಕಾರ್ಪಣೆಗೊಳಿಸಿದರು.

ಇದೇ ವೇಳೆ ಅವರ ಅಭಿಮಾನಿಗಳು ಕೇಕ್ ಕತ್ತರಿಸುವ ಮೂಲಕ ಎಸ್ಸೆಸ್ಸೆಂ ಜನ್ಮ ದಿನವನ್ನು ಸಡಗರ, ಸಂಭ್ರಮದಿಂದ ಆಚರಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಉಪಮೇಯರ್ ಯಶೋಧ ಹೆಗ್ಗಪ್ಪ, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಎ. ನಾಗರಾಜ್, ಆಶಾ ಉಮೇಶ್, ಸವಿತಾ ಹುಲ್ಮನಿ ಗಣೇಶ್, ಎಸ್.ಟಿ. ವೀರೇಶ್, ಕೆ. ಎಂ. ವೀರೇಶ್, ವಿಪಕ್ಷ ನಾಯಕ ಪ್ರಸನ್ನಕುಮಾರ್, ಪಾಲಿಕೆ ಆಯುಕ್ತರಾದ ರೇಣುಕಾ, ಈಇ ಉದಯ ಕುಮಾರ್, ಚಂದನ್ ಪಲ್ಲಾಗಟ್ಟೆ, ಪರಮೇಶ್ವರ ಗೌಡ್ರು, ಅಬ್ದುಲ್ ಲತೀಫ್, ಗಣೇಶ್ ಹುಲ್ಮನಿ, ಅಂದನೂರು ಮುಪ್ಪಣ್ಣ, ಕಾಂಗ್ರೆಸ್ ಮುಖಂಡರು, ವಾರ್ಡಿನ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಎಸ್ಸೆಸ್ಸೆಂ, ಭದ್ರಾ ನೀರಿನ ಇತ್ಯರ್ಥ ಇಂದಲ್ಲಾ, ನಾಳೆ ಬಗೆಹರಿಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಭದ್ರಾ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರಿದ್ದು, ನಮ್ಮ ರೈತರೆಲ್ಲರೂ ಭತ್ತ ಬೆಳೆಯುವಷ್ಟು ನೀರಿದೆ. ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದರು.

ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಸಮಸ್ಯೆ ಇತ್ಯರ್ಥಕ್ಕೆ ಮುಂದಾಗಲಿದ್ದಾರೆಂದು ಹೇಳಿದರು.

ಸರ್ಕಾರದಲ್ಲಿ ಮೂರು ಡಿಸಿಎಂ ಹುದ್ದೆಗಳನ್ನು ಸೃಷ್ಟಿಸುವುದಕ್ಕೆ ಎಸ್ಸೆಸ್ಸೆಂ ವಿರೋಧ ವ್ಯಕ್ತಪಡಿಸಿದರು.


ಹುಟ್ಟುಹಬ್ಬದ ಶುಭಾಶಯಗಳು

ಖ್ಯಾತ ಉದ್ಯಮಿಗಳಾದ
ಶ್ರೀ ಎಸ್. ಎಸ್. ಗಣೇಶಣ್ಣ
ಅವರಿಗೂ ಹಾಗೂ ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ
ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್
ಅವರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ಎಸ್.ಜಿ. ಮಲ್ಲಿಕಾರ್ಜುನ (ಬಾಬು)
ಗೌಡ್ರ ಮನೆತನದವರು ಶಾಮನೂರು
ಗೌಡ್ರ ಪ್ರಜ್ವಲ್


# ಕನ್ನಡ ಅಧ್ಯಯನ ಪೀಠಕ್ಕೆ ಸರ್ಕಾರ ನಿರ್ಲಕ್ಷ್ಯ : ಸಿರಿಗೆರೆ ಶ್ರೀ



ಸಿರಿಗೆರೆ, ಸೆ.22- ಕನ್ನಡ ಅಧ್ಯಯನ ಪೀಠಕ್ಕೆ ಸಂಬಂ ಧಿಸಿದಂತೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ಸಿರಿಗೆರೆಯ ಗುರುಶಾಂತೇಶ್ವರ ಭವನದ ಮುಂಭಾಗದಲ್ಲಿ ಇಂದು ಜರುಗಿದ ಲಿಂ. ಶ್ರೀಗಳ 31ನೆಯ ಶ್ರದ್ಧಾಂಜಲಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕರ್ನಾಟಕ ಹಾಗೂ ಪಾಶ್ಚಾತ್ಯ ದೇಶಗಳ ವಿದ್ಯಾರ್ಥಿಗಳ ಕನ್ನಡ ಕಲಿಕೆ ಅನುಕೂಲವಾಗುವ ನಿಟ್ಟಿನಲ್ಲಿ ನಮ್ಮ ಒತ್ತಾಸೆಯ ಮೇರೆಗೆ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು 5 ಕೋಟಿ ರೂ. ಮಂಜೂರು ಮಾಡಿದ್ದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯರು ಜರ್ಮನಿಗೆ ಹೋಗಿ ಕೇವಲ ಪ್ರವಾಸ ಮಾಡಿಕೊಂಡು ಬಂದರೇ ಹೊರತು, ಏನೂ ಮಾಡಲಿಲ್ಲ ಎಂದು ಶ್ರೀಗಳು ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಂಸ್ಕೃತಿ ಇಲಾಖೆಯಿಂದ ಏನೂ ಆಗಲಿಲ್ಲ. ನವೆಂಬರ್ ಬಂದಾಗ ಮಾತ್ರ ಕನ್ನಡ ಎಂದು ಬೊಬ್ಬೆ ಹೊಡೆಯಲಾಗುತ್ತಿದೆ. ಕನ್ನಡ ಕಲಿಯುವಂತಹ ವಿದ್ಯಾರ್ಥಿಗಳಿಗೆ ಸರ್ಕಾರ ಅವಕಾಶ ಕಲ್ಪಿಸಿಕೊಡಬೇಕು. ಕನ್ನಡ ಅಧ್ಯಯನ ಪೀಠ ಸ್ಥಗಿತವಾಗದ ಹಾಗೆ ಪ್ರೋತ್ಸಾಹಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

## ಡಿ.ಎಲ್ ಸ್ಲಾಟ್ ತೆರೆಯಲಾಗಿದೆ

ದಾವಣಗೆರೆ, ಸೆ.22- ಇದೇ ದಿನಾಂಕ 20 ರಿಂದ ಮುಂದಿನ 3 ತಿಂಗಳ ಡಿ.ಎಲ್ ಸ್ಲಾಟ್ ಗಳನ್ನು ತೆರೆಯಲಾಗಿದೆ. ಬೆಳಿಗ್ಗೆ 8 ಗಂಟೆಯಿಂದ www.parivahan.sewa sarathi ವೆಬ್ ಸೈಟ್‌ನಲ್ಲಿ ಡಿ.ಎಲ್ ಟೆಸ್ಟ್‌ಗೆ ಸಂಬಂಧಿಸಿದಂತೆ ತಮಗೆ ಬೇಕಾದ ದಿನಾಂಕವನ್ನು ಕಾಯ್ದಿರಿಸಿಕೊಳ್ಳಬಹುದು. ತಾವು ಕಾಯ್ದಿರಿಸಿದ ದಿನಾಂಕದಂದು ಡಿ.ಎಲ್ ಟೆಸ್ಟ್‌ಗೆ ಹಾಜರಾಗಬೇಕು. ದಿನಾಂಕವನ್ನು ಬದಲಾಯಿಸಲು ಅವಕಾಶವಿರುವುದಿಲ್ಲ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀಧರ ಕೆ. ಮಲ್ಲಾಡ ತಿಳಿಸಿದ್ದಾರೆ.


ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours
ಎಸ್‌ಜಿಎಂ ಟೂರ್ಸ್
8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ -2.
ವಿಮಾನ ಮತ್ತು ಬಸ್ಸಿನಲ್ಲಿ
26-10-2023 ರಿಂದ - 10 ದಿನಗಳ ಉಜ್ಜಯಿನಿ ಹಾಗೂ ಗುಜರಾತ್ ವಿಶೇಷ ಪ್ರವಾಸ
7 ದಿನಗಳ ತಮಿಳುನಾಡು ವಿಶೇಷ ಪ್ರವಾಸ - 26-01-2024 ರಿಂದ
ಮಧುರೈ, ಕನ್ಯಾಕುಮಾರಿ, ತಿರುವನಂತಪುರಂ (ಅನಂತಪದ್ಮನಾಭ), ರಾಮೇಶ್ವರಂ, ಶ್ರೀರಂಗಂ
13-02-2024 ರಿಂದ - ಪ್ರಯಾಗ್‌ರಾಜ್, ಸೀತಾಮಡಿ, ಕಾಶಿ - 7 ದಿನಗಳ ಪ್ರವಾಸ
19-02-2024 ರಿಂದ - 8 ದಿನಗಳು - ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ವೈದ್ಯನಾಥ್ ಜ್ಯೋತಿರ್ಲಿಂಗ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 78925 10652, 94834 63783, 80509 52637, 94481 59303.
ನಮ್ಮ ಕಚೇರಿಗೆ ಮಹಿಳಾ ವ್ಯವಸ್ಥಾಪಕರು ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿರಿ...



ಕವಿರತ್ನ ಕಾಳಿದಾಸ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಶಿವಾಲಿ ಟಾಕೀಸ್ ಎದುರು, ದಾವಣಗೆರೆ-577 006. ಮೊ. : 97406 80677, 94485 89625, 94484 15351

25ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ
ಬೆಳ್ಳಿ ಮಹೋತ್ಸವ
ಶ್ರೀ ಈಶಣ್ಣ ಯರಗಲ್, ಸಂಸ್ಥಾಪಕರು

ಸಂಘದ ಎಲ್ಲಾ ಸದಸ್ಯರುಗಳೇ, ನಮ್ಮ ಸಂಘದ 2022-23ನೇ ಸಾಲಿನ 25ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 23.09.2023ನೇ ಶನಿವಾರ ಮಧ್ಯಾಹ್ನ 12 ಕ್ಕೆ ನಗರದ ದಾನ ರತ್ನಾಕರ ಚಿರಡೋಣಿ ಶ್ರೀಮತಿ ಕಾವೇರಮ್ಮ, ಶ್ರೀ ಸತ್ಯನಾರಾಯಣ ಶ್ರೇಷ್ಠಿ ಸಭಾ ಭವನ, ಇಡಬ್ಲ್ಯೂಎಸ್ ಕಾಲೋನಿ, 1ನೇ ಮೇನ್, 4ನೇ ಕ್ರಾಸ್, ಅಯ್ಯಪ್ಪಸ್ವಾಮಿ ದೇವಸ್ಥಾನದ ಎದುರು, ಶಿವಾಲಿ ರಸ್ತೆ, ಡಿ. ದೇವರಾಜ ಅರಸು ಬಡಾವಣೆ, ದಾವಣಗೆರೆ-06. ಇಲ್ಲಿ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೆ. ಹೇಮಂತಕುಮಾರ್ ಅವರ ಘನ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಆದ್ದರಿಂದ ಸೊಸೈಟಿಯ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಪಾಲ್ಗೊಂಡು ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಲಾಗಿದೆ.

ಕಾರ್ಯಕಾರಿ ಮಂಡಳಿ ಅಪ್ಪಣೆ ಮೇರೆಗೆ ಸಹಿ/- (ಎಸ್. ರಮೇಶ್), ಕಾರ್ಯದರ್ಶಿ

ಶ್ರೀ ಕೆ. ಹೇಮಂತಕುಮಾರ್ ಅಧ್ಯಕ್ಷರು
ಶ್ರೀ ಬಿ. ವಿಜಯಕುಮಾರ ನಿರ್ದೇಶಕರು
ಶ್ರೀ ಕೆ.ಜಿ. ಪ್ರಕಾಶ ನಿರ್ದೇಶಕರು
ಶ್ರೀ ಎಸ್.ಎಂ. ಹಿರೇಮಠ ನಿರ್ದೇಶಕರು
ಶ್ರೀಮತಿ ಶಾಂತಮ್ಮ ಟಿ. ಸವದತ್ತಿ ನಿರ್ದೇಶಕರು
ಶ್ರೀ ಎ.ಡಿ. ಭೀಮಪ್ಪ ಉಪಾಧ್ಯಕ್ಷರು
ಶ್ರೀಮತಿ ಇ.ವೈ. ಜೀವಿಕಾ ನಿರ್ದೇಶಕರು
ಶ್ರೀ ಮಲ್ಲಿಕಾರ್ಜುನಪ್ಪ ಟಿ. ನಿರ್ದೇಶಕರು
ಶ್ರೀ ಇ.ವೈ. ಲೋಹಿತ್ ನಿರ್ದೇಶಕರು
ಶ್ರೀ ಷಣ್ಮುಖಪ್ಪ ನಿರ್ದೇಶಕರು
ಶ್ರೀ ಎಂ.ಎನ್. ನಾಗರಾಜ್ ನಿರ್ದೇಶಕರು
ಶ್ರೀ ಶ್ರೀಕಾಂತ ಹೆಚ್.ಎನ್. ನಿರ್ದೇಶಕರು
ಶ್ರೀ ಭೀಮಾನಂದ ವಿ.ವೈ. ನಿರ್ದೇಶಕರು
ಶ್ರೀ ರಮೇಶ್ ಎಸ್. ಕಾರ್ಯದರ್ಶಿ
ಮಂಜುಳಾ ಪಿ. ಅಟೆಂಡರ್
ಸುನೀತಾ ಜೆ.ಆರ್. ಸಹಾಯಕರು
ಶ್ವೇತಾ ಕೆ.ಎಂ. ಸಹಾಯಕರು
ಮಹಾರುದ್ರಪ್ಪ ಬಿ.ಎಂ. ಪಿಗ್ಮಿ ಸಂಗ್ರಹಕಾರರು
ಜೆ.ಸಿ. ರಮೇಶ ಪಿಗ್ಮಿ ಸಂಗ್ರಹಕಾರರು
ದಿವ್ಯ ಹೆಚ್.ಕೆ. ಪಿಗ್ಮಿ ಸಂಗ್ರಹಕಾರರು

ಸೂಚನೆ :ಈಗಾಗಲೇ ಸೊಸೈಟಿಯ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಸೊಸೈಟಿಗೆ ವಾಪಸ್ ಬಂದಿರುರುತ್ತವೆ. ಸೊಸೈಟಿಯ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ನೀಡಬೇಕಾಗಿ ವಿನಂತಿ.

ವಿಶೇಷ ಸೂಚನೆ : ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದೇ ಇದ್ದ ಸದಸ್ಯರು, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಮಹಾಸಭೆಗೆ ಆಗಮಿಸಬೇಕಾಗಿ ವಿನಂತಿ.



ಇಂದು ಪೌರ ಕಾರ್ಮಿಕರ ದಿನಾಚರಣೆ : ಶುಭಾಶಯಗಳು

ಪೌರ ಕಾರ್ಮಿಕರ ದಿನಾಚರಣೆ ಸಮಾರಂಭಕ್ಕೆ ಆಗಮಿಸುತ್ತಿರುವ
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ
ಶ್ರೀ ಎಸ್. ಎಸ್. ಮಲ್ಲಿಕಾರ್ಜುನ್ ಅವರಿಗೂ
ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ
ಡಾ. ಶಾಮನೂರು ಶಿವಶಂಕರಪ್ಪ
ಅವರಿಗೂ
ಹೃದಯಪೂರ್ವಕ ಸ್ವಾಗತ.... ಸುಸ್ವಾಗತ....

ದಿನಾಂಕ : 23-09-2023ರ ಶನಿವಾರ
ಸಮಯ : ಮಧ್ಯಾಹ್ನ 12 ಗಂಟೆಗೆ
ಸ್ಥಳ : ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪ ದಾವಣಗೆರೆ.

ಶ್ರೀಮತಿ vರೇಣುಕಾ
ಆಯುಕ್ತರು
ದಾವಣಗೆರೆ ಮಹಾನಗರ ಪಾಲಿಕೆ

ಕೆ.ಎಸ್. ಗೋವಿಂದರಾಜ್
ಅಧ್ಯಕ್ಷರು
ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘ

ಶುಭ ಕೋರುವವರು : ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘ



# ಸಂಸದರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದ ಕರವೇ

ದಾವಣಗೆರೆ, ಸೆ. 22- ಕಾವೇರಿ ವಿಚಾರವಾಗಿ ರಾಜ್ಯದ ಸಂಸದರು ಸಕಾರಾತ್ಮಕವಾಗಿ ಸ್ಪಂದಿಸದ ಹಿನ್ನೆಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ ಬಣ) ಕಾರ್ಯಕರ್ತರು ಸಂಸದರ ಕಚೇರಿಗೆ ಇಂದು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಉಪ ವಿಭಾಗಾಧಿಕಾರಿಗಳ ಮೂಲಕ ಪ್ರಧಾನಿಯವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಇದೇ ವೇಳೆ ಮಾತನಾಡಿದ ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಅವರು, ಕರ್ನಾಟಕದ ಜೀವನದಿ ಕಾವೇರಿ ಬೆಂಗಳೂರು, ಮಂಡ್ಯ, ಮೈಸೂರು ಭಾಗದ ಜನರಿಗೆ ಉಸಿರಾಗಿದ್ದು, ಹೀಗಿರುವಾಗ ರಾಜ್ಯದ ಸಂಸದರು ಸಂಸತ್‌ನಲ್ಲಿ ಕರ್ನಾಟಕ ನೀರಾವರಿ ವಿಚಾರದಲ್ಲಿ ಧ್ವನಿ ಎತ್ತದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯದ ಸಂಸದರು ಈ ಬಗ್ಗೆ ಧ್ವನಿ ಎತ್ತಬೇಕಾಗಿದೆ. ವೇದಿಕೆ ರಾಜ್ಯಾಧ್ಯಕ್ಷ ನಾರಾಯಣ ಗೌಡರ ನೇತೃತ್ವದಲ್ಲಿ ದೆಹಲಿ ಜಂತರ್ ಮಂತರ್ ಬಳಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕರವೇ ಪದಾಧಿಕಾರಿಗಳಾದ ಮಂಜುಶ್ರೀ ಗೌಡ, ಗಿರೀಶ್ ಕುಮಾರ್, ಜಿ.ಎಸ್. ಸಂತೋಷ್ ಕುಮಾರ್, ರವಿಕುಮಾರ್, ಜಬೀವುಲ್ಲಾ, ಎಸ್.ಡಿ. ಲೋಕೇಶ್, ಗೋಪಾಲ ದೇವರಮನಿ, ತನ್ವೀರ್, ಖಾದರ್ ಬಾಷಾ, ಬಾಷಾಸಾಬ್, ಆಟೋ ರಫೀಕ್, ಮೋಹನ್, ಸುರೇಶ್, ಮಹೇಶ್ವರಪ್ಪ, ಸೈಯದ್ ಹುಸೇನ್ ಬಾಷಾ, ಜಮಾಲುದ್ದೀನ್, ದಾದಾಪೀರ್, ಎಂ.ವೈ. ಮಹಾಂತೇಶ್, ಜಗಳೂರು ಆಸೀಫ್, ಅಯೂಬ್, ಹರಿಹರ ರಾಜೇಶ್, ಇಮ್ತಿಯಾಜ್, ಬಸಮ್ಮ, ಶಾಂತಮ್ಮ, ಸಾಕಮ್ಮ, ಆಲೂರು ನಾಗಮ್ಮ ಮತ್ತಿತರರಿದ್ದರು.

# ಭಾರತದ ಭೂ ಪಟ ಚಂದ್ರಲೋಕದವರೆಗೆ ವಿಸ್ತರಿಸಿದ ವಿಜ್ಞಾನಿಗಳು

## ಲಿಂ. ಶ್ರೀಗಳವರ 31ನೇ ಶ್ರದ್ಧಾಂಜಲಿಯ ಮೂರನೆಯ ದಿನದ ಕಾರ್ಯಕ್ರಮದಲ್ಲಿ ತರಳಬಾಳು ಜಗದ್ಗುರುಗಳ ಶ್ಲಾಘನೆ

ಸಿರಿಗೆರೆ, ಸೆ.22- ಭಾರತದ ಭೂಪಟವನ್ನು ಚಂದ್ರಲೋಕದವರೆಗೆ ವಿಸ್ತರಿಸಿ, ಭಾರತದ ಹಿರಿಮೆಯನ್ನು ಹೆಚ್ಚಿಸಿದ ಕೀರ್ತಿ ಇಸ್ರೋ ವಿಜ್ಞಾನಿಗಳಿಗೆ ಸಲ್ಲುತ್ತದೆ. ಎಂದು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಿರಿಗೆರೆಯ ಗುರುಶಾಂತೇಶ್ವರ ಭವನದ ಮುಂಭಾಗದ ವಿಶಾಲ ವೇದಿಕೆಯಲ್ಲಿ ಶುಕ್ರವಾರ ಜರುಗಿದ ಲಿಂ.ಶ್ರೀಗಳ 31ನೆಯ ಶ್ರದ್ಧಾಂಜಲಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಇಡೀ ಜಗತ್ತು ಚಂದ್ರಯಾನವನ್ನು ಕುತೂಹಲದಿಂದ ವೀಕ್ಷಿಸಿತು. ತಾಯಂದಿರು ಮಕ್ಕಳಿಗೆ ಹಾಲು ಕುಡಿಸುವಾಗ ಚಂದ್ರನನ್ನು ತೋರಿಸುತ್ತಿದ್ದರು. ಅದರಿಂದ ಪ್ರೇರಣೆ ಪಡೆದ ನಮ್ಮ ವಿಜ್ಞಾನಿಗಳು ಚಂದ್ರನಿಗೆ ಲಗ್ಗೆ ಹಾಕಿ ಚಂದ್ರಯಾನವನ್ನು ಯಶಸ್ವಿಗೊಳಿಸಿದ್ದಾರೆ ಎಂದು ಶ್ಲಾಘಿಸಿದರು.

ಭೂಮಿ ಮೇಲೆ ಬದುಕುವವರಿಗೆ ಪ್ರಜ್ಞೆ ಬೇಕಿದೆ. ಹೇಗೆ ಜೀವಿಸಬೇಕೆಂಬ ಪ್ರಜ್ಞೆ ಇರಬೇಕು. ಅಂತಹ ಪ್ರಜ್ಞೆ ಮೂಡಿಸುವುದೇ ಧರ್ಮ ಹಾಗೂ ಭಾರತೀಯ ಸಂಸ್ಕೃತಿ. ಲಿಂ. ಜಗದ್ಗುರುಗಳು ಅಂತಹ ಪ್ರಜ್ಞಾವಂತರನ್ನಾಗಿ ನಿಮ್ಮನ್ನು ಮಾಡಬೇಕೆಂದು ಸ್ವಾತಂತ್ರ್ಯ ಪೂರ್ವದಿಂದ ಅವರು ಮಾಡಿದ ಪ್ರಯತ್ನ, ಶಾಲೆಗಳು ಇಂದು ಬೃಹತ್ತಾಗಿ ಬೆಳೆದಿವೆ. ನಿಮ್ಮ ಮೇಲೆ ತುಂಬಾ ಆಶಾಭಾವನೆ ಇದೆ ಎಂದು ಹೇಳಿದರು.

ಹರಪನಹಳ್ಳಿ ಶಾಸಕಿ ಲತಾ ಮಲ್ಲಿಕಾರ್ಜುನ್ ಮಾತನಾಡಿ, ತಾಲ್ಲೂಕಿನ ಏತ ನೀರಾವರಿ ಯೋಜನೆ ಸಂಬಂಧಿಸಿದ ಗರ್ಭಗುಡಿ ಬ್ಯಾರೇಜ್ ಕಾಮಗಾರಿ ಪೂರ್ಣಗೊಳಿಸಲು ಸಿರಿಗೆರೆ ಶ್ರೀಗಳವರ ಮಾರ್ಗದರ್ಶನ ಅಗತ್ಯವಾಗಿದ್ದು, ಮುಂದಿನ ವರ್ಷಗಳಲ್ಲಿ ಹರಪನಹಳ್ಳಿ ಪಟ್ಟಣದಲ್ಲಿ ತರಳಬಾಳು ಹುಣ್ಣಿಮೆ ಆಚರಿಸಲು ಅವಕಾಶ ಮಾಡಿಕೊಡಿ ಎಂದರು.

ರಾಣೆಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ ಮಾತನಾಡಿ, ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಣ ಮತ್ತು ಸ್ಪೋಕನ್ ಇಂಗ್ಲೀಷ್ ಮುಖ್ಯ. ಹಿರಿಯ ಶ್ರೀಗಳವರು ಗ್ರಾಮೀಣ ಭಾಗದಲ್ಲಿ ಶಾಲೆಗಳನ್ನು ತೆರೆದು ಶಿಕ್ಷಣ ಕ್ರಾಂತಿಗೆ ಮುನ್ನುಡಿಯಾಗಿದ್ದಾರೆ ಎಂದರು.

ದಾವಣಗೆರೆ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಮಾತನಾಡಿ,. ಶ್ರೀ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಸಮಾಜದ ಪರಿವರ್ತಕರಾಗಿ ಜೀವನದಲ್ಲಿ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ. ಸಿರಿಗೆರೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಭವ್ಯ ಭಾರತದ ಮಾದರಿ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾದ ಜರ್ಮನಿಯ ಆನಿ ಫಿಟ್ಜರ್ ಕನ್ನಡದಲ್ಲಿಯೇ ಮಾತನಾಡಿ ಮೆಚ್ಚುಗೆ ಗಳಿಸಿದರು. ಕೊಪ್ಪಳ ವಿಶ್ವವಿದ್ಯಾನಿಲಯ ಕುಲಪತಿ ಡಾ. ಬಿ.ಕೆ.ರವಿ ಮಾತನಾಡಿದರು. ಕಲಾವಿದರಾದ ಆನಂದ ಎಸ್.ಪಾಟೀಲ್ ಅವರ ತಂಡ ವಚನಗೀತೆ ಹಾಡಿದರು. ಬರ್ಗಿ ಕುಮುಟಾದ ಶ್ರೀ ಬ್ರಹ್ಮಲಿಂಗೇಶ್ವರ ಯಕ್ಷ ಮಿತ್ರ ಮಂಡಳಿ ಯಕ್ಷಗಾನ ಹಾಗೂ ತರಳಬಾಳು ಕಲಾಸಂಘದ ತಂಡದವರು ಸೋಲಿಗರ ನೃತ್ಯ, ಕರಗ ಕೋಲಾಟ ನೃತ್ಯಪ್ರದರ್ಶನ ಪ್ರದರ್ಶಿಸಿದರು.

ಇಸ್ರೋ ವಿಜ್ಞಾನಿಗಳಾದ ರಾಮನಗೌಡ ವಿ ನಾಗನಗೌಡ, ಗೋವಿಂದರಾಜ್ ಶೆಟ್ಟಿ, ಹೇಮಲತಾ ಶ್ರೀ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎಸ್.ಬಿ.ರಂಗನಾಥ್, ಹೆಚ್. ವಿ.ವಾಮದೇವಪ್ಪ ಉಪಸ್ಥಿತರಿದ್ದರು.



### ಚಂದ್ರಯಾನದ ಯಶಸ್ಸು ಕಾಪಿಟ್ಟುಕೊಳ್ಳಬೇಕಿದೆ: ವಿಜ್ಞಾನಿ ದಾರುಕೇಶ್

ಭಾರತೀಯರು ಸ್ವತಂತ್ರವಾಗಿ, ಸೃಜನಶೀಲರಾಗಿ ಯೋಚಿಸಬಲ್ಲರು ಎಂಬುದನ್ನು ಚಂದ್ರಯಾನ-3ರ ಯಶಸ್ಸು ನಿರೂಪಿಸಿದೆ ಎಂದು ಬೆಂಗಳೂರು ಇಸ್ರೋ ವಿಜ್ಞಾನಿ ಡಾ. ಬಿ.ಎಚ್.ಎಂ.ದಾರುಕೇಶ್ ಹೇಳಿದರು.

ಚಂದ್ರಯಾನ-3ರ ಯಶಸ್ಸನ್ನು ಮುಂದೆಯೂ ಕಾಪಿಟ್ಟುಕೊಳ್ಳಬೇಕಿದೆ. ಈ ಯಶಸ್ಸಿನ ಮೇಲೆ ಮುಂದಿನ ದಿನಗಳಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ಭಾರತ ಜಗತ್ತಿನ ಲೀಡರ್ ಆಗಬೇಕಿದೆ ಎಂದು ಹೇಳಿದರು.

ಆರಂಭದಲ್ಲಿ ಇಸ್ರೋ ಯೋಜನೆಯಾಗಿದ್ದ ಚಂದ್ರಯಾನ ನಂತರ ಇಡೀ ದೇಶದ ಹಾಗೂ ವಿಶ್ವದ ಯೋಜನೆಯಾಗಿ ರೂಪುಗೊಂಡಿತು. 130 ಕೋಟಿ ಜನರು ಭಾರತೀಯರು ಹೆಮ್ಮೆಯಿಂದ ತಲೆ ಎತ್ತಿ ನೋಡುವ ಸ್ಥಿತಿಯನ್ನು ಚಂದ್ರಯಾನ-3 ನಿರ್ಮಾಣ ಮಾಡಿದೆ ಎಂದರು.

ನಮ್ಮದೇಶ ವಿಜ್ಞಾನವನ್ನು ಸಂಭ್ರಮಿಸಿದ ರೀತಿ ಜಗತ್ತಿಗೆ ಮಾದರಿ. ನಮ್ಮ ಭಾರತೀಯರು ವಿಜ್ಞಾನವನ್ನು ಎಷ್ಟರ ಮಟ್ಟಿಗೆ ತನ್ನದಾಗಿಸಿಕೊಂಡರು ಎಂಬುದನ್ನು ಚಂದ್ರಯಾನ ತೋರಿಸಿಕೊಟ್ಟಿದೆ. ಯುಟ್ಯೂಬ್ ಮೂಲಕ ಅತಿ ಹೆಚ್ಚು ಅಂದರೆ 80 ಲಕ್ಷ ಜನರು ನೇರವಾಗಿ ವೀಕ್ಷಿಸಿದ ಪ್ರಥಮ ಚಂದ್ರಯಾನದ್ದು.

ವೈಜ್ಞಾನಿಕ ಕ್ಷೇತ್ರದ ಒಂದು ಘಟನೆ ಜನರನ್ನು ಎಷ್ಟರ ಮಟ್ಟಿಗೆ ಆಕರ್ಷಿಸಬಲ್ಲದು. ಅಂತಹ ಆಕರ್ಷಣೆಗೆ ಜನರು ಎಷ್ಟರ ಮಟ್ಟಿಗೆ ತಯಾರಾಗಿದ್ದರು ಎಂಬುದು ಭಾರತದ ಮಟ್ಟಿಗೆ ವಿಶೇಷವಾದದ್ದು. ತಕ್ಷಶಿಲಾ, ನಳಂದ ಸಮಯದಲ್ಲಿ ಜಗತ್ತಿಗೆ ಜ್ಞಾನ ಹಂಚಿದ್ದ ಭಾರತ ನಂತರ ಕೈಗಾರಿಕಾ ಉದ್ಯಮ ಹಾಗೂ ಸೆಮಿ ಕಂಡಕ್ಟರ್ ತಂತ್ರಜ್ಞಾನ ವಂಚಿತವಾಗಿ ಇಂದು ಮತ್ತೆ ಯಶಸ್ಸು ಕಂಡಿದೆ ಎಂದು ಹೇಳಿದರು. ಅಮೇರಿಕಾದಲ್ಲಿ ನಾಸಾ ಸಂಸ್ಥೆಯಲ್ಲಿ ಅನೇಕ ಭಾರತೀಯ ವಿಜ್ಞಾನಿಗಳಿದ್ದಾರೆ. ಆದರೆ ಭಾರತೀಯ ಇಸ್ರೋದಲ್ಲಿ ಯಾವ ಒಬ್ಬ ಅಮೆರಿಕಾದವರೂ ಇಲ್ಲ. ಇದು ನಮ್ಮಸಾಧನೆ ಎಂದು ಹೇಳಿದರು.

# ಬಿಜೆಪಿ-ಜೆಡಿಎಸ್ ಮೈತ್ರಿ ಘೋಷಣೆ

## ವಿಧಾನಸಭಾ ಸೋಲಿನ ಕಹಿ ನಂತರ 'ಮಿತ್ರ ಲಾಭ'ಕ್ಕೆ ಉಭಯತರ ಯತ್ನ

ಬೆಂಗಳೂರು, ಸೆ. 22 – ಲೋಕಸಭಾ ಚುನಾವಣೆ ಸಮೀಪಿಸುತ್ತಿರುವಂತೆಯೇ, ಎನ್.ಡಿ.ಎ.ಗೆ ಸೇರ್ಪಡೆಯಾಗಲು ಜೆಡಿಎಸ್ ಸಮ್ಮತಿಸಿದೆ. ಇದರಿಂದಾಗಿ ಉಭಯ ಪಕ್ಷಗಳಿಗೆ ಚುನಾವಣಾ ಲಾಭವಾಗುವ ನಿರೀಕ್ಷೆ ಇದೆ.

ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಜೊತೆ ಚರ್ಚಿಸಿದ ನಂತರ ಎನ್.ಡಿ.ಎ. ಸೇರುವ ಘೋಷಣೆ ಹೊರ ಬಿದ್ದಿದೆ. ಇದರೊಂದಿಗೆ ಕರ್ನಾಟಕದಲ್ಲಿ ಬಿಜೆಪಿ - ಜೆಡಿಎಸ್ ಮೈತ್ರಿ ಪಕ್ಕಾ ಆಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ನಡ್ಡಾ, ಎನ್.ಡಿ.ಎ. ಭಾಗವಾಗಲು ಜೆಡಿಎಸ್ ನಿರ್ಧರಿಸಿರುವುದು ನನಗೆ ಸಂತೋಷ ತಂದಿದೆ. ಇದರಿಂದ ಎನ್.ಡಿ.ಎ.ಗೆ ಮತ್ತಷ್ಟು ಬಲವಾಗಲಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನವ ಭಾರತ, ಬಲಿಷ್ಠ ಭಾರತದ ಪರಿಕಲ್ಪನೆ ಬಲವಾಗಲಿದೆ ಎಂದು ಹೇಳಿದ್ದಾರೆ.

ದಕ್ಷಿಣ ಕರ್ನಾಟಕದಲ್ಲಿ ಜೆಡಿಎಸ್ ಹೆಚ್ಚು ಬಲಿಷ್ಠವಾಗಿದೆ. ಈ ಭಾಗದಲ್ಲಿ ಬೇರು ಬಿಡುವ ಬಿಜೆಪಿ ಪ್ರಯತ್ನ ಇದುವರೆಗೂ ನಿರೀಕ್ಷಿತ ಫಲ ನೀಡಿಲ್ಲ. ಈ ಹಿನ್ನೆಲೆಯಲ್ಲಿ ಮೈತ್ರಿ ಉಭಯ ಪಕ್ಷಗಳಿಗೆ ಲಾಭವಾಗುವ ಸಾಧ್ಯತೆ ಇದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಎನ್.ಡಿ.ಎ. ಬೃಹತ್ತಾಗಿ, ಬಲಿಷ್ಠವಾಗಿ ಹಾಗೂ ನಂಬಿಕಾರ್ಹ ಮೈತ್ರಿಕೂಟವಾಗಿ ಬೆಳೆಯುತ್ತಿದೆ. ಎನ್.ಡಿ.ಎ. ಕುಟುಂಬಕ್ಕೆ ಜೆ.ಡಿ.ಎಸ್. ಸ್ವಾಗತಿಸುತ್ತೇನೆ. ನಾವು ಜೊತೆಯಾಗಿ ಎನ್.ಡಿ.ಎ. ಹಾಗೂ ನವ ಭಾರತ ನಿರ್ಮಿಸುತ್ತೇವೆ ಎಂದು ಹೇಳಿದ್ದಾರೆ.

ಇನ್ನೋರ್ವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ ನೀಡಿದ್ದು, ನಮ್ಮ ನಾಯಕ ಅಮಿತ್ ಷಾ ಹಾಗೂ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಕುಮಾರಸ್ವಾಮಿ ಭೇಟಿ ಮಾಡಿರುವುದು ಯಶಸ್ವಿಯಾಗಿದೆ. ಜೆಡಿಎಸ್ ನಾಯಕನನ್ನು ಎನ್.ಡಿ.ಎ.ಗೆ ಸ್ವಾಗತಿಸುತ್ತೇವೆ ಎಂದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರೂ ಸಹ ಜೆಡಿಎಸ್ ಪಕ್ಷ ಎನ್.ಡಿ.ಎ. ಸೇರುವುದನ್ನು ಸ್ವಾಗತಿಸಿದ್ದು, ಈ ಮೈತ್ರಿಯಿಂದ ರಾಜ್ಯದಲ್ಲಿ ಗರಿಷ್ಠ ಸ್ಥಾನಗಳು ಸಿಗಲಿವೆ ಎಂದಿದ್ದಾರೆ.


ಜೆಡಿಎಸ್ ಜೊತೆ ಬಿಜೆಪಿ ಮೈತ್ರಿ ಮಾಡಿಕೊಳ್ಳಲಿದೆ ಎಂದು ಯಡಿಯೂರಪ್ಪ ಕೆಲ ದಿನಗಳ ಹಿಂದೆ ತಿಳಿಸಿದ್ದರು. ಆದರೆ, ಇನ್ನೂ ಮೈತ್ರಿ ವಿಷಯ ಅಂತಿಮವಾಗಿಲ್ಲ ಎಂದು ಅಡ್ಡ ಗೋಡೆಯ ಮೇಲೆ ದೀಪ ಇಟ್ಟಿದ್ದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಎರಡೂ ಮುಖಭಂಗಕ್ಕೀಡಾಗಿದ್ದವು. ಈ ಹಿನ್ನೆಲೆಯಲ್ಲಿ ಉಭಯ ಪಕ್ಷಗಳು ಮೈತ್ರಿ ಬಗ್ಗೆ ಆಸಕ್ತಿ ತೋರಿದ್ದವು.

ಜೆಡಿಎಸ್‌ಗೆ ಈಗ ಅಸ್ತಿತ್ವದ ಸವಾಲು ಎದುರಾಗಿದೆ. ಈ ಕಾರಣದಿಂದಾಗಿಯೇ ಮೈತ್ರಿಗೆ ಹೆಚ್ಚು ಒಲವು ತೋರುತ್ತಿದೆ ಎಂದು ಕೆಲ ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ. ಈ ಹಿಂದೆ ಬಿಜೆಪಿ ಹಾಗೂ ಕಾಂಗ್ರೆಸ್ ಎರಡರ ಜೊತೆಗೂ ಜೆಡಿಎಸ್ ಮೈತ್ರಿ ಮಾಡಿಕೊಂಡಿದೆ.

# ನಾಡಿದ್ದುವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರ ಪುಣ್ಯಾರಾಧನೆ

ದಾವಣಗೆರೆ,ಸೆ.22- ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರ ಪುಣ್ಯಾರಾಧನಾ ಸೇವಾ ಸಮಿತಿ, ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರ ಧರ್ಮಸಂಸ್ಥೆ ಇವರ ವತಿಯಿಂದ ಲಿಂ. ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಶ್ರೀಗಳ 37ನೇ ವಾರ್ಷಿಕ ಪುಣ್ಯಾರಾಧನೆ ಮತ್ತು ಲಿಂ. ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರ 12ನೇ ವರ್ಷದ ಸ್ಮರಣೋತ್ಸವ ಹಾಗೂ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯರ ದ್ವಾದಶ ಪೀಠಾರೋಹಣ ವರ್ಧಂತಿ ಮಹೋತ್ಸವ, ಜನಜಾಗೃತಿ ಧರ್ಮ ಸಮ್ಮೇಳನ ಕಾರ್ಯಕ್ರಮವು ಇದೇ ದಿನಾಂಕ 25 ಮತ್ತು 26ರಂದು ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ ಜರುಗಲಿದೆ.



ದಿನಾಂಕ 25ರ ಸೋಮವಾರ ಸಂಜೆ 6 ಗಂಟೆಗೆ ನಡೆಯುವ ಭಾವೈಕ್ಯ, ಜನಜಾಗೃತಿ, ಧರ್ಮ ಸಮಾರಂಭದ ಸಾನ್ನಿಧ್ಯವನ್ನು ಶ್ರೀಶೈಲ ಪೀಠದ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯರು ವಹಿಸಲಿದ್ದು, ಹೊನ್ನಾಳಿ ಹಿರೇಕಲ್ಮಠದ ಡಾ. ಒಡೆಯರ ಶಿವಪ್ರಕಾಶ ಶಿವಾಚಾರ್ಯ ಅಧ್ಯಕ್ಷತೆ ವಹಿಸುವರು.

ಹುಣಸಘಟ್ಟದ ಗುರುಮೂರ್ತಿ ಶಿವಾಚಾರ್ಯ ಶ್ರೀಗಳು ಮತ್ತು ಒಡೆಯರ ಶಿವಪ್ರಕಾಶ ಶಿವಾಚಾರ್ಯ ಶ್ರೀಗಳ ಸಮ್ಮುಖದಲ್ಲಿ ಜರುಗುವ ಕಾರ್ಯಕ್ರಮವನ್ನು ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ವಿಪ ಸದಸ್ಯ ಕೆ.ಎಸ್. ನವೀನ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. 'ಸಮಾಜ ಮತ್ತು ಪಂಚಪೀಠಗಳ ಮಹತ್ವದ ಕುರಿತು ವ್ಯಂಗ್ಯ ಚಿತ್ರಕಾರ ಹೆಚ್.ಬಿ. ಮಂಜು ನಾಥ್ ಉಪನ್ಯಾಸ ನೀಡಲಿದ್ದಾರೆ.

ದಿನಾಂಕ 26ರಂದು ಸಂಜೆ 6 ಗಂಟೆಗೆ ನಡೆಯುವ ಧರ್ಮಸಭೆ ಕಾರ್ಯಕ್ರಮದಲ್ಲಿ ಉಜ್ಜಯಿನಿ ಮಹಾಪೀಠದ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಶ್ರೀಗಳು ಹಾಗೂ ಶ್ರೀಶೈಲ ಪೀಠದ ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶ್ರೀಗಳು ಸಾನಿಧ್ಯ ವಹಿಸಲಿದ್ದು, ರಾಮಘಟ್ಟದ ಶ್ರೀ ರೇವಣಸಿದ್ಧ ಶಿವಾಚಾರ್ಯ ಶ್ರೀಗಳು ಅಧ್ಯಕ್ಷತೆ ವಹಿಸುವರು.

### ಉಮಾಪತಿ ಪಂಡಿತಾರಾಧ್ಯ ಶ್ರೀಗಳ ಸ್ಮರಣೋತ್ಸವ

ರಾಚೋಟಿ ಶಿವಾಚಾರ್ಯ ಶ್ರೀ ಹಾಗೂ ರೇಣುಕ ಶಿವಾಚಾರ್ಯ ಸ್ವಾಮೀಜಿಯವರ ಸಮ್ಮುಖದಲ್ಲಿ ಜರುಗುವ ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಉದ್ಯಮಿ ಎಸ್. ಎಸ್. ಗಣೇಶ್, ಶಾಸಕ ಶಿವಗಂಗಾ ಬಸವರಾಜ್, ಮಾಜಿ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ನಗರದಲ್ಲಿ ಇಂದು ಪೌರ ಕಾರ್ಮಿಕರ ದಿನಾಚರಣೆ

ಮಹಾನಗರ ಪಾಲಿಕೆ ವತಿಯಿಂದ ಇಂದು ಮಧ್ಯಾಹ್ನ 12.30ಕ್ಕೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್‌ಕಾರ್ಯಕ್ರಮವನ್ನು ಉದ್ಘಾಟಿಸುವರು. ಮಹಾಪೌರ ವಿನಾಯಕ ಬಿ.ಹೆಚ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಜಿ. ಎಂ.ಸಿದ್ದೇಶ್ವರ, ಶಾಸಕ ಶಾಮನೂರು ಶಿವಶಂಕರಪ್ಪ, ಉಪ ಮಹಾಪೌರರಾದ ಯಶೋಧ ಯಗ್ಗಪ್ಪ, ವಿರೋಧ ಪಕ್ಷದ ನಾಯಕ ಪ್ರಸನ್ನಕುಮಾರ್, ಜಿಲ್ಲಾಧಿಕಾರಿ ಡಾ.ವೆಂಕಟೇಶ್, ಪಾಲಿಕೆ ಆಯುಕ್ತೆ ರೇಣುಕಾ, ಎಸ್ಪಿ ಉಮಾ ಪ್ರಶಾಂತ್, ಜಿಲ್ಲಾ ನಗರ ಅಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಡಾ.ಎನ್ ಮಹಾಂತೇಶ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಮೀನಾಕ್ಷಿ ಜಗದೀಶ್, ಹೆಚ್. ಉದಯ್ ಕುಮಾರ್, ಅಹಮದ್ ಕಬೀರ್ ಖಾನ್ ಮತ್ತಿತರರು ಭಾಗವಹಿಸುವರು.

## ನಗರದಲ್ಲಿ ಇಂದು ವಿಜಯನಗರ ಸೊಸೈಟಿಯ ವಾರ್ಷಿಕ ಮಹಾಸಭೆ

ವಿಜಯನಗರ ಕ್ರೆಡಿಟ್ ಕೋ-ಆಪ್ ಸೊಸೈಟಿ ಮಹಾಸಭೆ ಇಂದು ಬೆಳಿಗ್ಗೆ 11-30ಕ್ಕೆ ಶ್ರೀ ಕೃಷ್ಣ ಭವಾನಿ ಸಭಾ ಭವನದಲ್ಲಿ ಸಂಘದ ಅಧ್ಯಕ್ಷ ಜೆ.ಚಲುವಪ್ಪ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಕಾರ್ಯದರ್ಶಿ ದಯಾನಂದ ದೊಡ್ಡಮನಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ



ಬನ್ನಿ ಮಹಾಂಕಾಳಮ್ಮ ಯುವಕರ ಸಂಘದಿಂದ ಗಣೇಶ ಹಬ್ಬದ ಸ್ವಾಗೇರ್ ಪೇಟೆ ಹಿರೇಮಠ ಆವರಣದಲ್ಲಿ ಇಂದು ಅನ್ನ ಸಂತರ್ಪಣೆ ನಡೆಯಲಿದೆ.

## ನಗರದಲ್ಲಿ ಇಂದು ಫಾರ್ಮ ತರಂಗ್

ಬಾಪೂಜಿ ಫಾರ್ಮಸಿ ಕಾಲೇಜಿನ ವತಿಯಿಂದ ವಾರ್ಷಿಕೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10.30 ಕ್ಕೆ 'ಫಾರ್ಮ ತರಂಗ್-2023' ಕಾರ್ಯಕ್ರಮ ಎಂಬಿಎ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ.

ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ ಅತಿಥಿಯಾಗಿ ಆಗಮಿಸಲಿದ್ದು, ಬಾಪೂಜಿ ಫಾರ್ಮಸಿ ಕಾಲೇಜು ಅಧ್ಯಕ್ಷ ರಾಜನಹಳ್ಳಿ ರಮಾನಂದ್ ಅಧ್ಯಕ್ಷತೆ ವಹಿಸಲಿದ್ದಾರೆ.


## ಗಣೇಶೋತ್ಸವ : ಪಾಲಿಕೆ ನೌಕರರ ಸಂಘದಿಂದ ಅನ್ನ ಸಂತರ್ಪಣೆ



ದಾವಣಗೆರೆ, ಸೆ. 22 - ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘದಿಂದ ಪ್ರತಿಷ್ಠಾಪಿಸಲಾಗಿದ್ದ ಶ್ರೀ ವಿನಾಯಕ ಮೂರ್ತಿಯನ್ನು ಇಂದು ಸಂಜೆ ಭವ್ಯ ಮೆರವಣಿಗೆಯ ವಿಸರ್ಜಿಸಲಾಯಿತು.

ಇದೇ ಸಂದರ್ಭದಲ್ಲಿ ಏರ್ಪಡಿಸಿದ್ದ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಉಪ ವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ ಉದ್ಘಾಟಿಸಿದರು. ಮಹಾಪೌರರಾದ ವಿನಾಯಕ ಪೈಲ್ವಾನ್, ಆಯುಕ್ತರಾದ ಶ್ರೀಮತಿ ರೇಣುಕಾ, ಜಿಲ್ಲಾ ನಗರಾಭಿವೃದ್ಧಿ ಕೋಶದ ಅಧಿಕಾರಿ ಮಹಾಂತೇಶ್, ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್, ಕಾಂಗ್ರೆಸ್ ಮುಖಂಡರಾದ ಉಮೇಶ್, ಜಗದೀಶ್, ಪಾಲಿಕೆ ಕಾರ್ಯಪಾಲಕ ಅಭಿಯಂತ (ವಿದ್ಯುತ್) ಉದಯ್‌ಕುಮಾರ್, ಪಾಲಿಕೆ ಅಧಿಕಾರಿಗಳಾದ ಎಸ್.ಕೆ. ಪಾಂಡುರಾಜ್, ಅಸ್ಲಾಂ, ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ಸ್ಥಳೀಯ ವಿದ್ಯಾನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 12 ರವರೆಗೆ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗವಹಿಸಬಹುದು. ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಎನ್.ಎಂ. ತಿಪ್ಪೇಸ್ವಾಮಿ (98868-74078), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42713), ಎಂ.ಆರ್.ಅಶೋಕ್ ಕುಮಾರ್ (95917 76643) ಅವರನ್ನು ಸಂಪರ್ಕಿಸಬಹುದು.

## ಎಸ್ಸೆಸ್ಸೆಂ ಪುತ್ರ ಸಮರ್ಥ್‌ನಿಂದ ಗಣೇಶ ವಿಸರ್ಜನೆಗೆ ಚಾಲನೆ



ದಾವಣಗೆರೆ, ಸೆ. 22 - ನಗರದ ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟಿನ 49ನೇ ವರ್ಷದ ಗಣೇಶ ಮಹೋತ್ಸವದ ವಿಸರ್ಜನಾ ಮೆರವಣಿಗೆಯನ್ನು ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ್ ಶಾಮನೂರು ಚಾಲನೆ ನೀಡಿದರು.

ಈ ಸಂದರ್ಭ ದಲ್ಲಿ ಟ್ರಸ್ಟಿನ ಸದಸ್ಯರಾದ ಪ್ರವೀಣ್ ಹುಲ್ಲುಮನೆ, ಅವಿನಾಶ್ ಬಂದೋಳ್, ರಾಕೇಶ್ ಆರ್.ಎಸ್. ಕಣಸಾಳ್ ಪ್ರದೀಪ್ ಈ ಸಂದರ್ಭದಲ್ಲಿ ಇದ್ದರು.

## ನಗರದಲ್ಲಿಂದು ಉಚಿತ ಕಣ್ಣಿನ ತಪಾಸಣೆ ಶಿಬಿರ

ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ವತಿಯಿಂದ ಇಂದು ಬೆಳಿಗ್ಗೆ 9ರಿಂದ ಸಂಜೆ 5 ರವರೆಗೆ ಭಗತ್ ಸಿಂಗ್ ನಗರದ ಸ್ಟಾರ್ ಶಾದಿ ಮಹಲ್‌ನಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ದಾದು ಶೇಟ್ ಮತ್ತು ಕಾರ್ಯದರ್ಶಿ ಶಬೀರ್ ಅಲಿಖಾನ್ ತಿಳಿಸಿದ್ದಾರೆ.



**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**

**ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.**
**ವರ್ಕಿಂಗ್ ಫಾರ್ಮಾಸಿಸ್ಟ್ ವಿತ್ ಸರ್ಟಿಫಿಕೇಟ್**

**Mediworld Pharma C/o**
**AKP Healthcare Pvt. Ltd**
Hadadi Road, Opp. Taralabalu school,
Shrinivaasa Nagara, Davanagere, Karnataka 577005
**Mob: 96865 52532**


# ನೀರು ನಿರ್ವಹಣೆ ಸರ್ಕಾರದ ಎಡಬಿಡಂಗಿ ನಿಲುವು

## ಭದ್ರಾ ಸಲಹಾ ಸಮಿತಿ ಆದೇಶದಂತೆ ನೀರು ಹರಿಸಬೇಕು



ದಾವಣಗೆರೆ,ಸೆ.22- ಈ ಹಿಂದೆ ಭದ್ರಾ ನಾಲೆಗೆ ನೀರು ಹರಿಸುವ ಸಂಬಂಧ ಕರೆಯಲಾಗಿದ್ದ ನೀರಾವರಿ ಸಲಹಾ ಸಮಿತಿ ಸಭೆ ಯಲ್ಲಿ ನೀರು ಹರಿಸುವ ಸಂಬಂಧ ಏನು ತೀರ್ಮಾನ ಕೈಗೊಳ್ಳ ಲಾಗಿತ್ತೋ ಆ ಆದೇಶವನ್ನು ಯಥಾವತ್ತುಪಾಲಿಸಬೇಕಾಗಿರುವುದು ಅಧಿಕಾರಿಗಳ ಕರ್ತವ್ಯ ಎಂದು ಸಂಸದ ಜಿ. ಎಂ.ಸಿದ್ದೇಶ್ವರ ಹೇಳಿದ್ದಾರೆ.

ಭದ್ರಾ ನಾಲೆಗಳಲ್ಲಿ ಸತತ 100 ದಿನಗಳ ಕಾಲ ನೀರು ಹರಿಸುವ ತೀರ್ಮಾನವನ್ನು ಸಲಹಾ ಸಮಿತಿ ಸಭೆಯಲ್ಲಿ ಕೈಗೊಳ್ಳಲಾಗಿತ್ತು, ಆದರೆ ಈಗ 40 ದಿನಗಳ ಕಾಲ ನೀರು ಹರಿಸಿ ನೀರು ನಿಲುಗಡೆ ಮಾಡಿರುವುದು ಖಂಡನೀಯ. ನಾಲೆಗಳಲ್ಲಿ ನೀರು ಹರಿಸಲು ತೀರ್ಮಾನ ಕೈಗೊಳ್ಳುವ ಮುನ್ನವೇ ಯೋಚನೆ ಮಾಡಬೇಕಾಗಿತ್ತು ಈಗ ರೈತರೆಲ್ಲಾ ಭತ್ತ ನಾಟಿ ಮಾಡಿ ಗೊಬ್ಬರ ಇತ್ಯಾದಿಗಾಗಿ ಸಾಕಷ್ಟು ಹಣ ಖರ್ಚು ಮಾಡಿದ್ದಾರೆ, ಸುಮಾರು 50 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಭತ್ತದ ನಾಟಿ ಮಾಡಲಾಗಿದೆ.

ಇದಕ್ಕೆಲ್ಲಾ ರೈತರು ಖರ್ಚು ಮಾಡಿರುವ ಹಣ ಕಲ್ಪನೆ ಮಾಡಲಿಕ್ಕೂ ಅಸಾಧ್ಯವಾಗಿದೆ. ಇನ್ನು ಒಂದೂವರೆ ತಿಂಗಳು ನೀರು ಹರಿಸಿದರೆ ಭತ್ತದ ಬೆಳೆ ರೈತರ ಕೈಗೆ ಸಿಗಲಿದೆ, ನೀರು ಹರಿಸದೇ ಇದ್ದರೆ ರೈತರ ಸ್ಥಿತಿ ಅಯೋಮಯವಾಗಲಿದೆ. ನಾಲೆಯಲ್ಲಿ ನೀರು ನಿಲ್ಲಿಸುವುದೊಂದೆ ಪರಿಹಾರವಲ್ಲ, ಅದರ ಬದಲಾಗಿ ಸರ್ಕಾರ ಭದ್ರಾ ಡ್ಯಾಂ ಕ್ಯಾಚ್‌ಮೆಂಟ್ ಏರಿಯಾಗಳಲ್ಲಿ ಮೋಡ ಬಿತ್ತನೆ ಮಾಡಲಿ ಅದನ್ನು ಬಿಟ್ಟು ನೀರು ನಿಲ್ಲಿಸುವುದೊಂದನ್ನೇ ಮೊದಲನೇ ಆದ್ಯತೆಯಾಗಿ ಪರಿಗಣಿಸುವುದು ಬೇಡ.

ರೈತರ ಹಿತ ಕಾಯುವ ಕೆಲಸವನ್ನು ಸರ್ಕಾರ ಮಾಡಲಿ, ಕೃಷಿಯ ಬಗ್ಗೆ ಅನುಭವವೇ ಇಲ್ಲದವರು ಅಧಿಕಾರದಲ್ಲಿದ್ದರೆ ಏನಾಗಬಹುದು ಎಂಬುದಕ್ಕೆ ಕಾವೇರಿ ಮತ್ತು ಭದ್ರಾ ಜಲಾಶಯ ನೀರು ನಿರ್ವಹಣೆಯಲ್ಲಿ ತೋರುತ್ತಿರುವ ಎಡಬಿಡಂಗಿ ನಿಲುವುಗಳೇ ಉದಾಹರಣೆಯಾಗಿವೆ.

ಯಾವುದೇ ಸಬೂಬು ಹೇಳದೇ ಮೊದಲು ನೀರಾವರಿ ಸಲಹಾ ಸಮಿತಿ ಸಭೆಯ ಆದೇಶದಂತೆ ನಾಲೆಯಲ್ಲಿ ನೀರು ಹರಿಸಿ ರೈತರ ಬಗ್ಗೆ ಕಾಳಜಿ ಮೆರೆಯಿರಿ. ಇಲ್ಲದೇ ಇದ್ದರೆ ರೈತರ ಹಿತಕಾಯಲು ಬೀದಿಗಿಳಿದು ಹೋರಾಟ ಮಾಡುವುದು ಅನಿವಾರ್ಯವಾಗಲಿದೆ ಎಂದು ಸಂಸದರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.


**ದಾವಣಗೆರೆ ಶ್ರೀ ದಾನೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ.,**

2550/1-4, ಮೊದಲನೇ ಮಹಡಿ, 'ಪ್ರತೀಕ್ ಪ್ಲಾಜಾ' 6ನೇ ಮೇನ್, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ 02. ಫೋ. : 08192 457075

**2022-23ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

**ಮಾನ್ಯ ಸಹಕಾರಿ ಸದಸ್ಯರೇ,**

ನಮ್ಮ ಸಹಕಾರಿಯ 2022-23ನೇ ಸಾಲಿನ 9ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 23.09.2023ರ ಶನಿವಾರ ಮಧ್ಯಾಹ್ನ 12.00 ಗಂಟೆಗೆ **ಆಡಳಿತ ಕಛೇರಿ, ಎಂ.ಸಿ.ಸಿ. 'ಎ' ಬ್ಲಾಕ್, ಪ್ರತೀಕ್ ಪ್ಲಾಜಾ, ಮೊದಲನೇ ಮಹಡಿ, ದಾವಣಗೆರೆ** ಇಲ್ಲಿ ಸಹಕಾರಿಯ ಅಧ್ಯಕ್ಷರಾದ **ಶ್ರೀ ಕೆ.ಎಂ. ರವಿಶಂಕರ್** ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ

**ಶ್ರೀಮತಿ ಕೆ.ಎಸ್. ಜ್ಯೋತಿ,** ಮುಖ್ಯ ಕಾರ್ಯನಿರ್ವಾಹಕರು

**ವಿಶೇಷ ಸೂಚನೆ ; 1) ಈಗಾಗಲೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಮಹಾಸಭೆಗೆ ಆಗಮಿಸಬೇಕಾಗಿ ವಿನಂತಿ.**

**ಇ-ಸ್ಟಾಂಪಿಂಗ್ ಸೌಲಭ್ಯವಿರುತ್ತದೆ**

